ಎನ್ನುವ ತೀರ್ಮಾನವನ್ನು ಕೇರಳ ಸರ್ಕಾರದವರು ಮಾಡುತ್ತಿದ್ದಾರೆ. ಈ ರೀತಿ ಮಾಡುವುದಾದರೆ ಅಲ್ಪಸಂಖ್ಯಾತರ ಮಕ್ಕಳಿಗೆ ಶಿಕ್ಷಣ ಹೇಗೆ ಸಿಕ್ಕಬೇಕು ; ಅಲ್ಪಸಂಖ್ಯಾತರ ಮಕ್ಕಳಿಗೆ ಅವರ ಭಾಷೆಯಲ್ಲಿ ಶಿಕ್ಷಣ ಸಿಕ್ಕಬೇಕು ಎನ್ನುವ ಈ ನೀತಿ ರಾಷ್ಟ್ರೀಯನೀತಿ, ಇದನ್ನು ಎಲ್ಲರೂ ಒಪ್ಪಿದ್ದಾರೆ ಆಯಾರಾಜ್ಯ ಸರ್ಕಾರದವರು ಸರಿಯಾದಂಥ ಶಿಕ್ಷಣ ಕ್ರಮವನ್ನು ಹಾಕಿಕೊಳ್ಳಬೇಕು, ನಮ್ಮರಾಜ್ಯಸರ್ಕಾರದವರು ಲಿಂಗ್ವಿಸ್ಟಿಕ್ ಶಿಕ್ಷಣದ ವಿಷೋಟ-ನ್ನು ಮಹಾರಾಷ್ಟ್ರಕ್ಕೆ ಕಳುಹಿಸುತ್ತಾರೆ.

ಶ್ರೀ ಡಿ. ದೇವರಾಜ ಅರಸ್. —ಆ ವಿಷಯವನ್ನು ನಾವು ಕೂಲಂಕುಷವಾಗಿ ತಿಳಿದುಕೊಳ್ಳದೆ ಇಲ್ಲಿ ಹೇಗೆ ಹೇಳುವುದು ?

SRI H. D. DEVEGOWDA —We are going to draw the attention of the Government. It is your responsib lity to collect the information and ascertain the correct information and take suitable action. In Sholapur a's agitation has taken p'ace only for that purpose. ಗಜೆಟ್‌ನಲ್ಲಿ ಬಂದಿರತಕ್ಕ ವರದಿಯನ್ನು ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದೀರಿ ಇದು ಸರಿಯಲ್ಲ ಈ ಎಲ್ಲಾ ವಿಷಯಗಳ ಬಗ್ಗೆ ಏನಾಯಿತು ಎನ್ನುವುದು ಗೊತ್ತಾಗಬೇಕು.

ಶ್ರೀ ಡಿ. ದೇವರಾಜ ಅರಸ್.—ನಾನು ಹೇಳುವುದು ಇಷ್ಟೆ, ಹಿಂದೆ ಮಹಾರಾಷ್ಟ್ರದಲ್ಲಿಯೂ ಹೀಗೆಯೇ ಆಯಿತು ; ಎಂದು ಮಾನ್ಯ ಸದಸ್ಯರು ಹೇಳಿದಾಗ ಅದನ್ನು ವಿರೋಧ ಮಾಡುವುದಕ್ಕೋಸ್ಕರ ಅವರಿಗೆ ನಾವು ಬರೆದಾಗ, ಆಗಿನ ಮುಖ್ಯಮಂತ್ರಿಗಳಾದವರು ನಮಗೆ ಪತ್ರ ಬರೆದು ಇದು ಸರಿಯಲ್ಲ ಎಂದು ಹೇಳಿದ್ದಾರೆ. ಪತ್ರಿಕೆಯಲ್ಲಿ ಬಂದ ತಕ್ಷಣ ಇಲ್ಲಿ ನಾವು ಉತ್ತರ ಹೇಳುವುದಕ್ಕಾಗುತ್ತದೆಯೇ ? ಆದು ಏನಂ ಇದೆ, ಕೇಳಿ ತಿಳಿದುಕೊಳ್ಳುವ ಪ್ರಯತ್ನವನ್ನು ಮಾಡೋಣ. ಅದಾದಮೇಲೆ ಇಲ್ಲಿ ಏನಾದರೂ ನಾವು ಮಾತನಾಡಬಹುದು. ಇದರ ಬಗ್ಗೆ ಅಲ್ಲಿನ ಪರಿಸ್ಥಿತಿ ಏನು ಎಂಬ ವಿಷಯವನ್ನು ತರಿಸಿಂವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ಇವತ್ತು ನಾಳೆಯೊಳಗೆ ತಿಳಿಸುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ನಮಗೆ ಗೊತ್ತಾದ ಕೂಡಲೇತಿಳಿಸುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ಈ ಸದನ ಮುಗಿಯುವುದರೊಳಗೆ ತಿಳಿಸುವುದಕ್ಕಾಗುತ್ತದೆಯೇ ?

ಶ್ರೀ ಡಿ. ದೇವರಾಜ ಅರಸ್,—ಗೊತ್ತಾದರೆ ತಿಳಿಸುತ್ತೇವೆ.

KARNATAKA STAMP AMENDMENT Bill 1975

Motion to eonsider

MR. DEPUTY SPEAKER.—I have received the recommendation of the Governor for the consideration of the Karnataka Stamp (Amendment) Bill, 1975 in pursuance of Clause 2 of Article 207 of the Constitution.

SRI N. HUTCHAMASTHI GOWDA (Minister for Revenue) Sir, I beg to move.

"That the Karnataka Sta np (Amendment) Bill, 1975 be taken into consideration."

MR. DEPUTY SPEAKER.—Motion moved :

"That the Karnataka Stamp (Amendment) Bill, 1975 be taken into consideration."

† ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಮಾನ್ಯ ಅಧ್ಯಕ್ಷರೇ, ಈ ಮಸೂದಾ ಕಾನೂನಿನ ಮೂಲ ಉದ್ದೇಶ ಕ್ರಯ, ದಾನಪತ್ರಗಳನ್ನು ಮಾಡುವಾಗ ಆಯಾ ಜಮೀನಿನ ಬೆಲೆಯನ್ನು ಹೆಚ್ಚು ಕಡಿಮೆ ಮಾಡಿ ವ್ಯವಹಾರ ನಡೆಸತಕ್ಕದ್ದು ಸರ್ಕಾರದ ಗಮನಕ್ಕೆ ಬಂದಿದೆ, ಅದಕ್ಕೋಸ್ಕರ ಈ ಮಸೂದಾ ಕಾನೂನನ್ನು ತಂದಿದ್ದೇವೆ. ಈ ಸಂದರ್ಭದಲ್ಲಿ ನಾವು ಪೈಲಟ್ ಸ್ಟಡಿ ಮಾಡಿ ೧೦೫೨ ಕೇಸುಗಳನ್ನು ನೋಡಿದ್ದರಲ್ಲಿ ಶೇಕಡ ೭೦ರಷ್ಟು ಕೇಸುಗಳಲ್ಲಿ ಶೇಕಡ ೫೦ರಷ್ಟು ಜಮೀನಿನ ಬೆಲೆಯನ್ನು ಕಡಿಮೆಮಾಡಿ ವ್ಯಾಪಾರ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆ ಬೆಂಗಳೂರು ಸುತ್ತಮುತ್ತ ಸುಮಾರು ೨೦ ಸಾವಿರ ಕಾಗದಪತ್ರಗಳಲ್ಲಿ ಇತರತಕ್ಕ ಆಸ್ತಿಗಳ ಕಿಮ್ಮತ್ತು ೨೦ ಕೋಟಿ ರೂಪಾಯಿಗಳಂ. ಇದರಲ್ಲಿ ಶೇಕಡ ೭೦ ರಷ್ಟು ವ್ಯವಹಾರ, ಶೇಕಡ ೫೦ರಷ್ಟು ಕಡಿಮೆ ಬೆಲೆಯನ್ನು ಹಾಕಿ, ವ್ಯವಹಾರ ನಡೆದಿದೆ. ಈ ರೀತಿಯಾಗಿ ಕಡಿಮೆ ಕಿಮ್ಮತ್ತು ಹಾಕಿ ವ್ಯವಹಾರ ನಡೆದಿದ್ದರಿಂದ ಸರ್ಕಾರಕ್ಕೆ ಬರಬೇಕಾಗಿದ್ದು ಬಹಳ ಹಣ ಕಡಿಮೆಯಾಗಿದೆ. ಬರಬೇಕಾದಷ್ಟು ರಿಜಿಸ್ಟ್ರೇಷನ್ ಫೀ, ಸ್ಟ್ಯಾಂಪ್ ಫೀ ಬರುತ್ತಿಲ್ಲ. ಒಂದೂವರ್ಷ ನಾವು ಪೈಲಟ್ ಸ್ಟಡಿಮಾಡಿ ನೋಡಿದ್ದರ ಮೇಲೆ ಇಷ್ಟು ಕಂಡುಬಂದಿದೆ. ಆದ್ದರಿಂದ ಇದಕ್ಕೆ ತಕ್ಕಂಥ ತಿದ್ದುಪಡಿ ಮಾಡಬೇಕಾದ್ದು ಅವಶ್ಯಕ ಎಂದು ನಾನು ಹೇಳುತ್ತೇನೆ. ಈ ತಿದ್ದುಪಡಿಯನ್ನು ಕಾನೂನಿನಲ್ಲಿ ನವೀಂದು ಮಾಡಿದ್ದೇವೆ. ಸೆಕ್ಷನ್ ೪೫ಎ ಅನ್ನು ತರಬೇಕಾಗಿದೆ. ಇದರ ಮುಖ್ಯ ಉದ್ದೇಶ ಏನೆಂದರೆ, ರಿಜಿಸ್ಟ್ರೇಷನ್ ಮಾಡತಕ್ಕ ಸಂದರ್ಭದಲ್ಲಿ ಕ್ರಯವಾಗಲೀ ದಾನಪತ್ರಗಳಾಗಲೀ ಮಾಡತಕ್ಕ ಸಂದರ್ಭದಲ್ಲಿ ಸಬ್‌ರಿಜಿಸ್ಟ್ರಾರ್ ಅವರಿಗೆ ಕ್ರಯ ಮಾಡತಕ್ಕ ಅಥವಾ ದಾನಪತ್ರ ಮಾಡತಕ್ಕ ಆಸ್ತಿಯ ಬೆಲೆ ಮಾರ್ಕೆಟ್ ಬೆಲೆಗಿಂತ ಕಡಿಮೆಯಾಗಿದೆಯೇ ಅಥವಾ ಸರಿಯಾಗಿದೆ ಎನ್ನುವುದು ಗೊತ್ತಾಗಬೇಕು. ಒಂದುವೇಳೆ ಯಾವುದಾದರೂ ಒಂದು ಕೇಸಿನಲ್ಲಿ ಇದು ಸರಿಯಾಗಿಲ್ಲ ಎಂದು ಕಂಡುಬಂದಪಕ್ಷದಲ್ಲಿ ಆತನು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಇದನ್ನು ತಿಳಿಸಬೇಕು. ಜಿಲ್ಲಾಧಿಕಾರಿಗಳು ಸಂಬಂಧಪಟ್ಟ ಪಾರ್ಟಿಗಳಿಗೆ ಸಾಕಾದಷ್ಟು ಕಾಲಾವಕಾಶ ಕೊಟ್ಟು ಮಾರ್ಕೆಟ್ ಬೆಲೆ ಇದರ ಬಗ್ಗೆ ಎಷ್ಟು ಇದೆ ಎನ್ನುವುದನ್ನು ನಿರ್ಧಾರ ಮಾಡಬೇಕಾಗುತ್ತದೆ. ನಿರ್ಧಾರ ಮಾಡಿದಮೇಲೆ ಹೆಚ್ಚಿಎಷ್ಟು ವ್ಯತ್ಯಾಸವಾಗುತ್ತದೆ ಅದನ್ನು ಕಂಡುಹಿಡಿದು ಅವನಿಗೆ ಇಷ್ಟು ಹೆಚ್ಚು ಫೀ ಕೊಡಬೇಕು ಎಂದು ಜಿಲ್ಲಾಧಿಕಾರಿಗಳು ತಿಳಿಸಬೇಕು. ಈರೀತಿಯಾಗಿ ಹಣವನ್ನು ವಸೂಲುಮಾಡತಕ್ಕ ಕ್ರಮ ಕೈಗೊಳ್ಳಬೇಕಾದ್ದು ಸೆಕ್ಷನ್ ೪೫ (೧) ಮತ್ತು (೨)ರಲ್ಲಿ ಇದೆ.

ಇದೂ ಅಲ್ಲದೆ ಸಬ್ ರಿಜಿಸ್ಟ್ರಾರ್ ತಿಳಿಸದೇ ಇದ್ದರೂ ಕೂಡ ಒಂದು ವೇಳೆ ಡೆಪ್ಯೂಟಿ ಕಮೀಷನರು ತಾವೇ ಒಂದು ಈ ಕ್ರಯಪತ್ರ ಮತ್ತು ದಾನ ಪತ್ರ ರಿಜಿಸ್ಟರ್ ಮಾಡುವ ಸಂದರ್ಭದಲ್ಲಿ ಆದರ ಮಾರ್ಕೆಟ್ ವ್ಯಾಲ್ಯೂ ಕಡಿಮೆ ಇದೆ ಎಂದು ತಿಳಿದಂಥ ಸಂದರ್ಭದಲ್ಲಿ ಅವನಿಗೆ ನೋಟೀಸ್ ಕೊಟ್ಟು ಇದಕ್ಕೆ ಮಾರ್ಕೆಟ್ ವ್ಯಾಲ್ಯೂ ಇಷ್ಟು ಕಡಿಮೆ ಹಾಕಿದ್ದೀಯಾ ಅಂತ ಹೇಳಿ ಇದಕ್ಕೆ ಒಂದು ದರ ಗೊತ್ತುಮಾಡಿ, ಆಮೇಲೆ ಅವನ ಹತ್ತಿರ ಡ್ಯೂಟಿ ವಸೂಲ್ಮಾಡುವ ಕಾರ್ಯಕ್ರಮ ತೆಗೆದುಕೊಳ್ಳಬಹುದು. ಈ ಒಂದು ಕಾನೂನು ಮೇ ಒಂದನೇ ತಾರೀಖಿನಿಂದ ಜಾರಿಗೆ ಬರಬೇಕು ಅಂತ ಇದೆ ಇದು ಜಾರಿಗೆ ಬಂದಮೇಲೆ ಇದರ ಹಿಂದಿನ ವ್ಯವಹಾರಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಏಕೆಂದರೆ ಇದು ಪ್ರಾಸ್ಪೆಕ್ಟೀವ್ ಆಗಿ ಇರಬೇಕೇ ವಿನಾ ರೆಟ್ರಾಸ್ಪೆಕ್ಟೀವ್ ಇರುವುದಕ್ಕೆ ಆಗುವುದಿಲ್ಲ.

3.30 P.M.

ಶ್ರೀ ಎಸ್. ಬಂಗಾರಪ್ಪ.— ಹದಿನಾಲ್ಕು ಕೋಟಿ ರೂಪಾಯಿನ ವ್ಯವಹಾರ ರೆಟ್ರಾಸ್ಪೆಕ್ಟೀವ್ ಆಗಿ ಕೊಡುವುದನ್ನು ಕೈಬಿಟ್ಟಿದ್ದೀರಲ್ಲಾ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇನ್ನು ಮುಂದೆ ಈ ವ್ಯವಹಾರ ನಡೆದ ಮೇಲೆ ಮೇ ೧ನೇ ತಾರೀಖಿನಿಂದ ನಡೆಸಿದಂಥ ವ್ಯವಹಾರ ಏನಿದ್ದರೂ ಅವನು ಗತಿಸಿ ಎರಡು ವರ್ಷವಾದರೂ ಕೂಡ ಅವನ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳಬಹುದು. ಆದರೆ ಇದು ಮೇ ೧ನೇ ತಾರೀಖಿನಿಂದ ಹಿಂದೆ ನಡೆದಿರ ತಕ್ಕಂಥ ವ್ಯವಹಾರಗಳಿಗೆ ಅನ್ವಯಿಸಕೂಡದು ಎಂಬ ಅಂಶ ಈ ಕಾನೂನಿನಲ್ಲಿ ಸಮಾವೇಶಗೊಳಿಸಿದ್ದೇವೆ. ಮತ್ತು ಡೆಪ್ಯೂಟಿ ಕಮೀಷನರ್‌ರವರ ತೀರ್ಮಾನದಲ್ಲಿ ಒಪ್ಪಿಕೊಳ್ಳದೇ ಇರತಕ್ಕಂಥಾವರು ಡಿಸ್ಟ್ರಿಕ್ಟ್ ಜಡ್ಜ್ ಮುಂದೆ ಅಪೀಲು ಮಾಡಿಕೊಳ್ಳುವುದಕ್ಕೆ ಒಂದು ಅವಕಾಶ ಇದೆ. ಕಾನೂನಿನ ತಿದ್ದುಪಡಿಯ ಮುಖ್ಯ ಈ ಉದ್ದೇಶವೂ ಇದರಲ್ಲಿ ಇದ್ದ ಹಾಗೂ ಆಯಿತು. ಇದನ್ನು ಜಾರಿಗೆ ತರಬೇಕಾದ ಸಂದರ್ಭ ಬಂದಾಗ ಇದರಲ್ಲಿ ಒಂದು ಭಾಗ ಬಿಟ್ಟುಬಿಟ್ಟರೆ ಅಂದರೆ ೪೫ (ಎ) ಬಿಟ್ಟರೆ ಉಳಿದೆಲ್ಲವೂ ಕೂಡ ಇಡೀ ರಾಜ್ಯಕ್ಕೆ ಅನ್ವಯವಾಗುವ ರೀತಿಯಲ್ಲಿ ಇರಬೇಕು ಅಂತ ಇದೆ. ಇದರಲ್ಲಿ ೪೫ (ಎ) ಮಾತ್ರ ಪಟ್ಟಣಗಳಿಗೆ ಮಾತ್ರ ಸಂಬಂಧಪಟ್ಟದ್ದು. ಆ ಪಟ್ಟಣಗಳು ಯಾವುವು ಎಂದರೆ ಒಂದು ಲಕ್ಷಕ್ಕೂ ಮೇಲ್ಪಟ್ಟು ಜನಸಂಖ್ಯೆ ಇರುವ ಬೆಂಗಳೂರು, ಮೈಸೂರು, ಮಂಗಳೂರು, ಬೆಳಗಾಂ, ರಾಯಚೂರು,

ಗುಲ್ಬರ್ಗ, ಬಿಜಾಪುರ, ಶಿವಮೊಗ್ಗ, ಭದ್ರಾವತಿ, ದಾರವಾಡ, ಹುಬ್ಬಳ್ಳಿ. ೪೫(ಎ) ಈ ಸಿಟಿಗಳಿಗೆ ಮಾತ್ರ ಅನ್ವಯವಾಗುತ್ತದೆ ಇದರಲ್ಲಿ ನಾವು ಒಂದು ನಿರೂಪಣೆ ಮಾಡಿದ್ದೇವೆ. ಈ ವ್ಯವಹಾರ ನೋಡಿ ಕೊಳ್ಳಬೇಕಾದರೆ ಬೆಂಗಳೂರಿಗೆ ಇಬ್ಬರು ಅಸಿಸ್ಟೆಂಟ್ ಕಮೀಷನರ್ ಮತ್ತು ಅವರಿಗೆ ಬೇಕಾದಂಥ ಸಿಬ್ಬಂದಿ ಒದಗಿಸತಕ್ಕಂಥಾದ್ದು ಮತ್ತು ಇತರೇ ಕಡೆಗಳಲ್ಲಿ ಡೆಪ್ಯೂಟಿ ಕಮೀಷನರಿಗೆ ಒಬ್ಬರು ಹೆಡ್‌ಕ್ವಾರ್ಟರ್ಸ್ ಅಸಿಸ್ಟೆಂಟ್ ಈ ವ್ಯವಹಾರ ಮಾಡಬೇಕು ಅಂತ, ಈ ಮಸೂದಾ ಕಾನೂನಿನಲ್ಲಿ ಇರತಕ್ಕಂಥ ಮುಖ್ಯ ಅಂಶ. ಇದು ಅತ್ಯಾವಶ್ಯಕವಾಗಿ ಆಗಬೇಕು. ಈ ಬಗ್ಗೆ ಆಗತಕ್ಕಂಥ ಅವ್ಯವಹಾರವನ್ನು ತಪ್ಪಿಸುವ ದೃಷ್ಟಿಯಿಂದ ಈ ಒಂದು ಮಸೂದೆಯನ್ನು ತಂದಿದ್ದೇವೆ ಆದುದರಿಂದ ಇದಕ್ಕೆ ಈ ಮಾನ್ಯ ಸಭೆ ಒಪ್ಪಿಗೆ ಕೊಡಬೇಕು ಅಂತ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಕೆ ಪುಟ್ಟಸ್ವಾಮಿ.—ಮೊದಲನೆಯದಾಗಿ ನಾನು ಹೇಳುವುದು ಈಗ ಹಾಲಿ ಇರತಕ್ಕಂಥ ಪ್ರಾವಿನ್ಸಿನಲ್ಲಿ ಸ್ಟಾಂಪ್ ವ್ಯಾಲ್ಯೂಯೇಷನ್ ಆಫೀಸರು ಏನು ಕೆಲಸ ಮಾಡುತ್ತಾರೆ ?

ಎರಡನೆಯದಾಗಿ ಈ ಕಾನೂನು ಒಂದು ಲಕ್ಷಕ್ಕೆ ಮೇಲ್ಪಟ್ಟು ಇರತಕ್ಕಂಥ ನಗರಗಳಿಗೆ ಅನ್ವಯಿಸುತ್ತದೆ. ಬಾಕಿ ನಗರಗಳಿಗೆ ಅನ್ವಯವಾಗುವುದಿಲ್ಲ ಅಂದರೆ ಇದಕ್ಕೆ ಕಾರಣ ಏನು ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮೊದಲನೆಯದಾಗಿ ಹೇಳುವುದಾದರೆ ಈಗ ಇರತಕ್ಕಂಥ ಕಾನೂನಿನಲ್ಲಿ ಸಬ್ ರಿಜಿಸ್ಟ್ರಾರ್‌ಗೆ ಇದು ಕಡಿಮೆ ವ್ಯಾಲ್ಯೂಯೇಷನ್ ಅಂತ ಗೊತ್ತಾದರೂ ಕೂಡ ಅದರ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ.

ಎರಡನೆಯದಾಗಿ ಕೆಲವು ನಗರಗಳಿಗೆ ಇದನ್ನು ಏತಕ್ಕೆ ಮಿತಿ ಮಾಡಿದ್ದೇವೆ ಎಂದರೆ ಎಲ್ಲಿ ವ್ಯವಹಾರಗಳು ಹೆಚ್ಚಿಗೆ ನಡೆಯುತ್ತದೆ ಅಲ್ಲಿ ಮಾತ್ರ ಈಗ ಸದ್ಯಕ್ಕೆ ತೆಗೆದುಕೊಂಡಿದ್ದೇವೆ. ಅಲ್ಲದೆ ಈಗ ನಾವು ಏನು ಮಾಡಿದ್ದೇವೆ ಎಂದರೆ ಈ ಒಂದು ಅಧಿಕಾರವನ್ನು ಸಬ್ ರಿಜಿಸ್ಟ್ರಾರ್‌ಗೆ ಕೊಡುತ್ತಿದ್ದೇವೆ. ಆದರೆ ಇದು ಕಡಿಮೆ ವ್ಯಾಲ್ಯೂಯೇಷನ್ ಇದೆ ಎಂದು ಅವರ ಗಮನಕ್ಕೆ ರಿಜಿಸ್ಟ್ರಾರ್ ಆಗುವ ವೇಳೆಯಲ್ಲಿ ಕಂಡುಬಂದಾಗ ಇದನ್ನು ರಿಜಿಸ್ಟ್ರಾರ್ ಮಾಡಿಸುವುದನ್ನು ತಪ್ಪಿಸಲು ಆಗದಿದ್ದರೂ ಈ ವಿಷಯವನ್ನು ಡೆಪ್ಯೂಟಿ ಕಮೀಷನರಿಗೆ ತಿಳಿಸಿ ಮುಂದಿನ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಅವರಿಗೆ ಅಧಿಕಾರ ಕೊಡುತ್ತೇವೆ. ಈಗ ಇರತಕ್ಕಂಥ ಕಾನೂನಿನಲ್ಲಿ ಸ್ಟಾಂಪ್ ವ್ಯಾಲ್ಯುಯೇಷನ್ ಆಫೀಸರು ಏನೂ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕಾಗುವುದಿಲ್ಲ.

ಮೂರನೆಯದಾಗಿ ಇನ್ನು ಉಳಿದ ಎಲ್ಲಾ ಭಾಗಗಳಿಗೂ ಈ ಕಾನೂನು ಅನ್ವಯಿಸಬೇಕಾದರೆ ಅಧಿಕಾರಿಗಳ ಸಂಖ್ಯೆಯನ್ನು ಜಾಸ್ತಿ ಮಾಡಬೇಕಾಗಿ ಬರುತ್ತದೆ. ಮುಖ್ಯವಾದ ಸ್ಥಳಗಳಲ್ಲಿ ನೋಡಿ ಇದು ಯಾವ ರೀತಿ ಆಗುತ್ತದೆ ಅನ್ನುವ ಅನುಭವ ಪಡೆದು ಆಮೇಲೆ ಉಳಿದ ಎಲ್ಲಾ ಭಾಗಗಳಿಗೂ ವಿಸ್ತರಣೆ ಮಾಡುವುದಕ್ಕೆ ಇದರಲ್ಲಿ ಅವಕಾಶ ಇದೆ. ಆದುದರಿಂದ ಇದನ್ನು ಈವಾಗ ಒಂದು ಮಿತಿಗೊಳಿಸಿದ್ದೇವೆ.

SRI K. PUTTASWAMY.—I would like to know the powers that are exercised by the Stamp Valuation Officers ; are they not clothed with any legal powers under any enactment ; and if so, what is it that they have done ? There are any number of Stamp Valuation Officers. As far as I know I do not think they have done much work. The Stamp Valuation Officers who have been appointed are expected to discharge certain duties under certain enactment. What are those enactments and what is it that they have done ? and since how long they have been working ?

ಶ್ರೀ ಎನ್. ಹುಚ್ಚಮಾಸ್ತಿಗೌಡ —ಈಗ ಇರತಕ್ಕಂಥ ಕಾನೂನಿನ ಪ್ರಕಾರ ಅವರಿಗೆ ಅಧಿಕಾರ ಇದ್ದರೂ ಕೂಡ ಅದರಿಂದ ಯಾವ ಫಲವೂ ಉಂಟಾಗಿಲ್ಲ ಅಲ್ಲದೆ ಅವರಿಗೆ ಎಲ್ಲೆಲ್ಲಿ ಯಾವ ಯಾವರೀತಿ ನಡೆದಿದೆ ಅನ್ನುವ ಬಗ್ಗೆ ಎಚ್ಚರಿಕೆ ತೆಗೆದುಕೊಂಡು ಅವರು ತಮ್ಮ ಅಧಿಕಾರವನ್ನು ಉಪಯೋಗಿಸಿ ಈ ಅವ್ಯವಹಾರಗಳನ್ನು ತಪ್ಪಿಸುವುದಕ್ಕೆ ಈ ಕಾನೂನಿಂದ ಸಾಧ್ಯ ಇಲ್ಲದೇ ಇತ್ತು ಈಗ ಅದಕ್ಕೆ ಬದಲಾಗಿ ಸಬ್ ರಿಜಿಸ್ಟ್ರಾರ್‌ರವರಿಗೇ ಈ ಅಧಿಕಾರವನ್ನು ನೇರವಾಗಿ ಕೊಟ್ಟರೆ ಆವಾಗ ಈ ಅವ್ಯವಹಾರ ಪತ್ತೆ ಆಗುತ್ತದೆ ಅನ್ನುವುದನು ತಿಳಿದುಕೊಂಡು ಈ ಕಾನೂನನ್ನು ನಾವು ತರುತ್ತಿದ್ದೇವೆ.

ಶ್ರೀ ಕೆ ಪುಟ್ಟಸ್ವಾಮಿ.—ಈಗ ಸ್ಟ್ಯಾಂಪ್ ವ್ಯಾಲ್ಯುಯೇಷನ್ ಆಫೀಸರ್‌ಗೆ ಇರತಕ್ಕಂಥ ಅಧಿಕಾರ ಏನು ? ಅವರಿಗೆ ಯಾವ ಸೆಕ್ಷನ್ ಪ್ರಕಾರ ಅಧಿಕಾರ ಇದೆ ? ಅದನ್ನು ಏತಕ್ಕೆ ಚರ್ಚೆ ಮಾಡಲಿಲ್ಲ ಅನ್ನುವುದನ್ನು ಹೇಳುತ್ತೀರಾ ?

ಶ್ರೀ ಎಸ್. ಬಂಗಾರಪ್ಪ. ಮಾನ್ಯ ಶಾಮಣ್ಣನವರು ಇದರ ಬಗ್ಗೆ ಚರ್ಚೆ ಪ್ರಾರಂಭಮಾಡುತ್ತಾರೆ. ಆದುದರಿಂದ ಈ ವಿಷಯ ಮೊದಲೇ ಗೊತ್ತಾದರೆ ಮಾತನಾಡುವುದಕ್ಕೆ ಅನುಕೂಲವಾಗುತ್ತದೆ. ಸುಮಾರು ಈ ೧೪ ಕೋಟಿ ರೂಪಾಯಿಗಳ ವ್ಯವಹಾರ ಈಗ ಬೆಳಕಿಗೆ ಬಂದಮೇಲೆ ಗೊತ್ತಾಯಿತು ಎಂದು ಹೇಳಿದ್ದಾರೆ. ಈ ೧೪ ಕೋಟಿ ರೂಪಾಯಿ ವ್ಯವಹಾರಕ್ಕೆ ಏನು ಒಂದು ಮಸೂದೆ ತರುತ್ತೀರೋ ಆ ಮಸೂದೆ ಅಡಿಯಲ್ಲಿಯೇ ಇದನ್ನೂ ರೆಟ್ರಾಸ್ಪೆಕ್ಟೀವ್ ಆಗಿ ಎಫೆಕ್ಟಿಗೆ ತರುವುದಕ್ಕೆ ಸಾಧ್ಯ ಇತ್ತು. ಅದನ್ನು ಏತಕ್ಕೆ ಮಾಡಲಿಲ್ಲ ? ಇದನ್ನು ಪ್ರಾಸ್ಪೆಕ್ಟೀವ್ ಆಗಿ ಮಾಡಬೇಕು ಎಂದು ಹೇಳುತ್ತೀರೇ ಹೊರತು ರೆಟ್ರಾಸ್ಪೆಕ್ಟೀವ್ ಆಗಿ ಏತಕ್ಕೆ ಮಾಡುವುದಿಲ್ಲ ಅನ್ನುವ ಬಗ್ಗೆ ತಾವು ಒಂದು ಕ್ಲಾರಿಫಿಕೇಷನ್‌ಗೆ ಉತ್ತರ ಕೊಟ್ಟರೆ ಅನಂತರ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ಇರತಕ್ಕಂಥ ಕಾನೂನಿನಲ್ಲಿ ಇಲ್ಲಿಯವರೆಗೆ ಯಾವ ರೀತಿ ಅವ್ಯವಹಾರ ನಡೆದಿದ್ದರೂ ಕೂಡ ಅದರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಆ ಬಗ್ಗೆ ಸರಿಯಾದ ಕಾನೂನೇ ಇರಲಿಲ್ಲ. ಈಗ ಏನಾಗಿದೆ ಎಂದರೆ ಡೆಪ್ಯೂಟಿ ಕಮೀಷನರಿಗೆ ಸ್ಯೂಯೋ ಮೋಟೋ ಮಾಡುವುದಕ್ಕೆ ಅವಕಾಶ ಇದೆ. ಸಬ್ ರಿಜಿಸ್ಟ್ರಾರ್‌ರವರಿಗೆ ಗೊತ್ತಾದ ಕಾಲದಲ್ಲಿ ಈ ಬಗ್ಗೆ ಕಾರ್ಯಕ್ರಮ ತೆಗೆದು ಕೊಳ್ಳುವುದಕ್ಕೆ ಇದರಿಂದ ಅನುಕೂಲವಾಗುತ್ತದೆ. ಅವರೆ ಹಿಂದಿನ ವ್ಯವಹಾರಗಳ ಬಗ್ಗೆ ಏನಾದರೂ ಕಾರ್ಯಕ್ರಮ ಕೈಗೊಳ್ಳಬೇಕಾದರೆ ಅವರು ಪ್ರತಿಯೊಂದು ಸಂದರ್ಭದಲ್ಲೂ ಕೂಡ ಆಫೀಕಾರಿಗಳ ಗಮನಕ್ಕೆ ತೆಗೆದುಕೊಂಡು ಬಂದು ಅನಂತರ ಅವರ ಮೇಲೆ ಏನು ಕಾರ್ಯಕ್ರಮ ಕೈಗೊಳ್ಳಬೇಕೋ ಅದನ್ನು ಕೈಗೊಳ್ಳಬೇಕಾಗುತ್ತದೆ. ಅದು ಸೂಪರ್‌ಸೆಷನ್ ಎಂದು ಇದು ಪಾಸ್ಪೆಕ್ಟೀವ್ ಆಗಿಯೇ ಇರಲಿ ಅಂತ ಮಾಡಿದ್ದೇವೆ ಮತ್ತು ಇನ್ನೊಂದು ಕಾರಣ ಏನೆಂದರೆ ಇದರಿಂದ ಇನ್ನೂ ಹೆಚ್ಚು ಗೊಂದಲಕ್ಕೆ ಅವಕಾಶವಾಗುತ್ತದೆ ಅಂತ ಈ ರೀತಿ ಮಾಡಿದ್ದೇವೆ.

† ಶ್ರೀ ಟಿ. ಆರ್. ಶಾಮಣ್ಣ (ಕೋಟೆ).—ಮಾನ್ಯ ಅಧ್ಯಕ್ಷರೇ, ಸರಕಾರ ಇಲ್ಲಿ ಅನೇಕ ಮಸೂದೆಗಳನ್ನು ತರುತ್ತಿದೆ. ಆದರೆ ಇಲ್ಲಿ ಇಂದು ತಂದಿರುವ ಮಸೂದೆ ಬಗ್ಗೆ ನಮ್ಮ ವಿರೋಧವಿಲ್ಲ. ಆದರೆ ಏಕೆ ಇಷ್ಟು ತಡವಾಗಿ ಇಲ್ಲಿ ಇದನ್ನು ಸರಕಾರದವರು ತಂದರು ಎನ್ನುವುದನ್ನು ಕೇಳಬೇಕಾಗಿದೆ. ಸರ ಕಾರಕ್ಕೆ ಅನೇಕ ಸಂದರ್ಭಗಳಲ್ಲಿ ಬರುವ ವರಮಾನ ಬಾರದೆ ಲೂಟಿಯಾಗುತ್ತಿದ್ದರೂ ಇದುವರೆಗೂ ಇಂತಹ ಕಾಯಿದೆ ತರಲಿಲ್ಲ. ಇಂತಹ ಒಂದು ಮಸೂದೆಗೆ ಯಾವ ಆಕ್ಷೇಪಣೆಯೂ ಇಲ್ಲ ಎಂದು ನನಗೆ ಕಾಣಿಸು ತ್ತದೆ. ಸಾಧಾರಣವಾಗಿ ನನ್ನನ್ನೂ ಸೇರಿಸಿಕೊಂಡು ಅನೇಕ ವ್ಯವಹಾರಗಳನ್ನು ಮಾಡುವಾಗ ಸ್ಟ್ಯಾಂಪು ಬೆಲೆಗಳನ್ನು ಕಡಿಮೆಮಾಡಿ ರಿಜಿಸ್ಟರು ಮಾಡುತ್ತಿರುವುದು ಅನೇಕ ಕಡೆಗಳಲ್ಲಿ ನಡೆಯುತ್ತಿವೆ. ಇದಲ್ಲದೆ ಸ್ಟ್ಯಾಂಪು ಡ್ಯೂಟಿಯಲ್ಲಿ ಶೇಕಡ ಎರಡರಷ್ಟು ಸರ್‌ಚಾರ್ಜ್ ನಗರ ಸಭೆಗೆ ಕೊಡಬೇಕೆಂದು ಇದೆ. ಇದರಿಂದ ನಗರ ಸಭೆಗೂ ಬರುವ ವರಮಾನ ಹೋಗುತ್ತಿದೆ. ಇದಲ್ಲದೆ ಸೆಂಟ್ರಲ್ ಗೌರ್ನಮೆಂಟಿನವರು ಕ್ಯಾಪಿಟಲ್ ಗೇನ್ಸ್ ಟ್ಯಾಕ್ಸು ಎಂದು ಬಿಲ್ಲು ತಂದಿದ್ದಾರೆ. ಇದರಲ್ಲಿ ಹಿಂದೆ ಇದ್ದ ಆಸ್ತಿ ಬೆಲೆ ಎಷ್ಟು ಇತ್ತ ? ಈಗಿರುವ ಆಸ್ತಿ ಬೆಲೆ ಎಷ್ಟು ? ಮತ್ತು ಹಿಂದೆ ಇದ್ದ ಆಸ್ತಿಗಿಂತ ಈ ಮಾರಾಟ ಮಾಡಿರುವುದರಿಂದ ಎಷ್ಟು ಲಾಭ ಬಂದಿದೆ ಮತ್ತು ಇದರಿಂದ ಬರುವ ತೆರಿಗೆಗೆ ಲೋಪವಾಗುವುದಿದ್ದರೆ ಅದಕ್ಕನುಗುಣವಾಗಿ ಕೇಂದ್ರ ಸರಕಾರ ಒಂದು ಹೊಸ ಕಾನೂನು ತಂದು ಇಂತಹ ಯಾವುದಾದರೂ ಆಸ್ತಿಯ ಬೆಲೆ ಕಡಿಮೆ ಬೆಲೆಗೆ ಮಾರಾಟ ಆಗಿದ್ದರೆ ಅಂತಹ ಆಸ್ತಿಗಳನ್ನು ಕೇಂದ್ರ ಸರಕಾರದವರೇ ಕೊಡುಕೊಳ್ಳಬಹುದು ಎಂದೂ ಬಂದಿದೆ. ಬೆಂಗಳೂರು ನಗರದಲ್ಲೇ ಸುಮಾರು ಒಂದು ವರ್ಷದಿಂದೀಚೆಗೆ ಇಪ್ಪತ್ತು ಸಾವಿರ ಕೇಸುಗಳು ರಿಜಿಸ್ಟರು ಆಗಿವೆ. ರಿಜಿಸ್ಟ್ರೇಷನ್ ಆಗಿರುವುದರ ಪೈಕಿ ಸುಮಾರು ಇಪ್ಪತ್ತು ಕೋಟಿಯಷ್ಟು ವ್ಯವಹಾರಗಳಾಗಿವೆ; ಮತ್ತು ಸರಕಾರಕ್ಕೆ ಬರಬೇಕಾದ ಲಕ್ಷಾಂತರ ರೂಪಾಯಿಗಳು ಸ್ಟ್ಯಾಂಪು ಡ್ಯೂಟಿ ಮೂಲಕ ನಷ್ಟವಾಗಿದೆ. ಇದನ್ನು ಮಾನ್ಯ ಮಂತ್ರಿಗಳೇ ಒಪ್ಪಿಕೊಂಡಿದ್ದಾರೆ. ನನಗೆ ಇದರಲ್ಲಿ ತೊಂದರೆಕ್ಕ ಒಂದು ಅಂಶ ಎಂದರೆ ಯಾರು ಇದನ್ನು ಪತ್ತೆ ಹಚ್ಚಲು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿರುತ್ತಾನೋ ಅವನೇ ಒಬ್ಬ ದೊಡ್ಡ ಖಿದೀಮನಾಗಿರುತ್ತಾನೆ. ಸಬ್ ರಿಜಿಸ್ಟ್ರಾರ್ ಬಳಿ ರಿಜಿಸ್ಟರು ಮಾಡಲು ಹೋದಾಗ ಅವರು ಪತ್ರ ನೋಡಿ ಹಾಕಿರುವ ಸ್ಟ್ಯಾಂಪು ಡ್ಯೂಟಿ ಕಡಿಮೆ ಎಂದು ಹೇಳಿದರೆ ಅದಕ್ಕೆ ಸರಿಯಾದ ಮಾಮೂಲು ಕೊಟ್ಟರೆ ಅವರು ರಿಜಿಸ್ಟರು ಮಾಡುತ್ತಾರೆ. ಇದರಿಂದ್ಕಾಯಿದೆಯಂತೆ ಜಾರಿಗೆ ಕೊಡಲು ಆಗುವುದಿಲ್ಲ. ಇದರ ಬಗ್ಗೆ ಸರಿಯಾಗಿಲ್ಲ ಎಂದು ತಿಳಿದರೆ ಡೆಪ್ಯೂಟಿ ಕಮಿಷನರು ಸುಮೋ ಮೋಟೋ–ತಕ್ಕ ಕ್ರಮ ತೆಗೆದುಕೊಳ್ಳಬಹುದು ಎಂದು ಬಿಲ್ಲಿನಲ್ಲಿ ಇದೆ. ಆದರೆ ಡೆಪ್ಯೂಟಿ ಕಮಿಷನರು

ಇದರ ಎಲ್ಲ ವ್ಯವಹಾರಗಳನ್ನೂ ನೋಡಲು ಆಗುವುದಿಲ್ಲ. ಇದಕ್ಕಾಗಿ ನನ್ನ ಒಂದು ಸಲಹೆ ಇಲ್ಲಿರುವ ಒಬ್ಬರು ಅಸಿಸ್ಟೆಂಟು ಕಮಿಷನರಿಗೆ ಇದರ ಕೆಲಸವನ್ನು ಪಟಿಸಿ ಅವರು ಪತ್ರ ರಿಜಿಸ್ಟರು ಆಗುವುದಕ್ಕೆ ಮೊದಲು ಅವರು ಬರೆದಿರುವ ವ್ಯಾಲ್ಯೂ ಸರಿಯಾಗಿದೆ ರಿಜಿಸ್ಟರು ಮಾಡಬಹುದು ಎಂದು ಅವರಲ್ಲಿ ಸರ್ಟಿಫಿಕೇಟು ತೆಗೆದುಕೊಂಡು ಬಂದ ಮೇಲೆ ಸಬ್ ರಿಜಿಸ್ಟ್ರಾರರವರು ರಿಜಿಸ್ಟರು ಮಾಡಬೇಕು ಎಂದು ಮಾಡಿದರೆ ಸರಿಯಾಗಿರುವುದಿಲ್ಲವೇ ? ಇದನ್ನು ಮಾನ್ಯ ಮಂತ್ರಿಗಳು ಯೋಚನೆ ಮಾಡಬೇಕೆಂದು ಹೇಳುತ್ತೇನೆ. ಕಾರ್ಪೊರೇಷನ್‌ನಲ್ಲಿ ಲೈಸನ್ಸ್ ಪಡೆಯುವಾಗ ಇಲ್ಲಿರುವ ಡ್ರಾಫ್ಟ್‌ಮನ್ ನೋಡಿ ಪ್ಲಾನುಗಳನ್ನು ಸರ್ಟಿಫೈ ಮಾಡಿದ ಮೇಲೆ ಲೈಸನ್ಸ್‌ನ್ನು ಕೊಡುತ್ತಾರೆ. ಆದರಂತೆ ಇಲ್ಲೂ ಮಾಡಬಹುದು ಇದರ ಬಗ್ಗೆ ಸರಕಾರದವರು ಅಸಿಸ್ಟೆಂಟು ಕಮಿಷನರಿಗೆ ಗೈಡ್ ಲೈನ್ಸ್ ಕೊಟ್ಟು ಅವರಲ್ಲಿ ಮನೆಗಳ ಬಗ್ಗೆ ರಿಜಿಸ್ಟರು ಮಾಡುವಾಗ ಅಂದರೆ ಆ ಮನೆ ಟೈಲ್ಡ್ ರೂಫೇ ಇಲ್ಲವೇ ತಾರಸಿ ಮನೆಯೇ ? ಇಲ್ಲವೇ ಮೊಜಾಕ್ ಸ್ಲಾಬ್ಸ್ ಮನೆಯೇ ಇತ್ಯಾದಿ ವಿವರಗಳನ್ನೆಲ್ಲಾ ನೋಡಿ ಆನಂತರ ಇದರ ಬಗ್ಗೆ ಬೆಲೆ ಸರಿಯಾಗಿದೆ ಎಂದು ಬರೆದು ಸರ್ಟಿಫೈ ಮಾಡಿದನಂತರ ಸಬ್‌ರಿಜಿಸ್ಟ್ರಾರರವರು ರಿಜಿಸ್ಟರು ಮಾಡಬಹುದು ಮತ್ತು ಇಂತಹ ಅಧಿಕಾರಿಗಳು ತಪ್ಪು ಮಾಡಿದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಲು ಸರಕಾರಕ್ಕೆ ಒಂದು ಅವಕಾಶ ಇರುತ್ತದೆ. ಇದರ ಬಗ್ಗೆ ಸರಕಾರ ಯೋಚನೆ ಮಾಡಬಹುದು ಎಂದು ನಾನು ಸಲಹೆ ಮಾಡುತ್ತೇನೆ. ಅಸಿಸ್ಟೆಂಟ್ ಕಮಿಷನರ ಕೈಕೆಳಗೆ ಒಬ್ಬರು ಟೆಕ್ನಿಕಲ್ ಎಕ್ಸ್‌ಪರ್ಟ್ ಎಂದು ಬೇಕಾದರು ಅವರ ಸಹಾಯಕ್ಕೆ ಒದಗಿಸಿಕೊಡಬಹುದು ಮತ್ತು ಸರಿಯಾಗಿ ಆಗ ರಿಜಿಸ್ಟರು ಮಾಡಲು ಸಹಾಯವಾಗುತ್ತದೆ ಮತ್ತು ಇದರಿಂದ ಸ್ವಲ್ಪಮಟ್ಟಿಗೆ ಅಕ್ರಮಗಳನ್ನು ತಡೆಗಟ್ಟಬಹುದು. ಯಾರೂ ಅಂಡರ್ ವ್ಯಾಲ್ಯೂ ಮಾಡಿದ್ದಾರೆ ಎಂದು ಕಂಡುಹಿಡಿಯುವುದು ಕಷ್ಟವಾಗುತ್ತದೆ. ನಾವೇ ಅನೇಕ ಸಾರಿ ಸ್ಟ್ಯಾಂಪು ಡ್ಯೂಟಿ ಕಡಿಮೆಮಾಡಿ ವ್ಯವಹಾರಗಳನ್ನು ಮಾಡಿದ್ದೇವೆ. ಇದು ಬಹಳ ಕಾಲದಿಂದಲೂ ರೂಢಿಯಲ್ಲಿ ಬಂದುಬಿಟ್ಟಿದೆ. ಸರಕಾರಕ್ಕೆ ಸರಿಯಾದ ಮಾಹಿತಿ ಸಿಗುತ್ತಿಲ್ಲ. ಕೇಂದ್ರ ಸರ್ಕಾರದ ಕಾನೂನು ರೀತಿ ಇಲ್ಲೂ ಕೂಡ ಒಂದು ಕಾನೂನು ತರಬಹುದು. ಇದಲ್ಲದೆ ಈಚೆಗೆ ಅರ್ಬನ್ ಸೀಲಿಂಗ್ ಆಕ್ಟ್ ಬರುತ್ತದೆ ಎಂದು ಬೆಂಗಳೂರು ನಗರದಲ್ಲಿದ್ದ ಸಾಹುಕಾರರು ಸುಮಾರು ೪೦-೫೦ ಮನೆಗಳನ್ನು ಇಟ್ಟಿದ್ದವರು ಇಂದು ಆ ಮನೆಗಳಲ್ಲಿ ಬಹುಭಾಗವನ್ನು ಮಾರಿದ್ದಾರೆ. ಇದರಿಂದ ಸುಮಾರು ನಲವತ್ತು ಕೋಟಿ ರೂಪಾಯಿಗಳಷ್ಟು ವ್ಯವಹಾರವಾಗಿದೆ ಮತ್ತು ಸರಕಾರಕ್ಕೆ ಕೂಡ ನಷ್ಟವಾಗಿದೆ. ಇದಕ್ಕಾಗಿ ನಾನು ಹೇಳಿದುವುದು ಬೇರೆ ಕಾನೂನುಗಳಲ್ಲಿ ರಿಟ್ರಾಸ್ಪೆಕ್ಟೀವ್ ಎಂದು ಮಾಡುತ್ತಾರೆ, ಆದರೆ ಈ ಕಾನೂನಿನಲ್ಲಿ ಏಕೆ ರಿಟ್ರಾಸ್ಪೆಕ್ಟೀವ್ ಎಂದು ಮಾಡಬಾರದು? ನಾನು ಇಲ್ಲಿ ಮೋಟಾರು ವೆಹಿಕಲ್ಸ್ ಬಿಲ್ಲನ್ನು ಚರ್ಚೆ ಮಾಡುವಾಗ ಒಂದು ಕಡೆಯೇ, ಒಂದನೇ ತಾರೀಖಿನಿಂದ ಜಾರಿಗೆ ಬರಬೇಕೆಂದು ತಿದ್ದುಪಡಿ ತಂದುದಕ್ಕೆ ಸರಕಾರ ಅದನ್ನು ಒಪ್ಪದೆ ಅದಕ್ಕಿಂತ ಹಿಂದಿನ ತಾರೀಖಿನಿಂದಲೇ ಜಾರಿಗೆ ಬರಬೇಕೆಂದು ರಿಟ್ರಾಸ್‌ಪೆಕ್ಟೀವ್ ಆಗಿ ಮಾಡಿದ್ದಾರೆ. ಅದರಂತೆ ಇಲ್ಲೂ ಕೂಡ ಏಕೆ ಮಾಡಬಾರದು ? ಇವರಿಂದ ಅನೇಕ ಅವ್ಯವಹಾರಗಳನ್ನು ತಡೆಗಟ್ಟಿಲೂ ಸಹಾಯವಾಗುತ್ತದೆ. ಇಂತಹ ವ್ಯವಹಾರಗಳು ಕಳೆದರೆಡು ವರ್ಷಗಳಿಂದ ಬೆಂಗಳೂರು ನಗರದಲ್ಲಿ ಆಗಿವೆ. ಇವು ಸರಕಾರಕ್ಕೂ ಗೊತ್ತಿದೆ ಈಚೆಗೆ ಬಿ.ಇ.ಎಲ್. ಸೊಸೈಟಿಗೆ ದೀನ್ ಪಾ ಎಸ್ಟೇಟಿನಿಂದ ಸುಮಾರು ಎರಡು ಮೂರು ಸಾವಿರ ಎಕರೆ ಇದ್ದುದರಲ್ಲಿ ಸುಮಾರು ೩೦೦ ಎಕರೆಗಳನ್ನು ಸೈಟು ಮಾಡಲಂ ಒಪ್ಪಿ ಮಾರಿದರು. ಒಂದೆಕರೆಗೆ ಸುಮಾರು ಎರಡು ಮೂರು ಸಾವಿರ ರೂಪಾಯಿ ಬೆಲೆ ಇಲ್ಲಿತು. ಬಿ.ಇ.ಎಲ್ ಸೊಸೈಟಿಯವರಿಗೆ ಕಾಸ್ಟ್ ಪ್ರೈಸು ಒಂದು ಗಜಕ್ಕೆ ಒಂದು ರೂಪಾಯಿ ಎಂದು ಕೊಟ್ಟರು. ಆದರೆ ಅವರು ಒಂದು ಗಜಕ್ಕೆ ೨೬ ರೂಪಾಯಿಗಳಂತೆ ಮಾರಿ ಲಕ್ಷಾಂತರ ರೂಪಾಯಿ ಲಾಭ ಮಾಡಿಕೊಂಡರು. ಇಂತಹ ವ್ಯವಹಾರಗಳನ್ನು ಕಂಡುಹಿಡಿಯಬೇಕಾದರೆ ಇದರಲ್ಲಿ ರಿಟ್ರಾಸ್‌ಪೆಕ್ಟೀವ್ ಆಗಿ ಇದ್ದರೆ ಅನುಕೂಲವಾಗುತ್ತದೆ ಮತ್ತು ಸರಕಾರಕ್ಕೆ ಹೆಚ್ಚು ವರಮಾನವೂ ಬರುತ್ತದೆ. ಮಾನ್ಯ ಮಂತ್ರಿಗಳು ಈ ರೀತಿ ಮಾಡುವುದು ಕಷ್ಟವಾಗುತ್ತದೆ ಎಂದು ಹೇಳುತ್ತಾರೆ.

ಇದಲ್ಲದೆ ಕೇಂದ್ರ ಸರಕಾರದವರು ತಂದಿರುವ ಕಾನೂನು ಪ್ರಕಾರ ಕೆಲವು ಕಡೆಗಳಲ್ಲಿ ಇನ್‌ಕಂ ಟ್ಯಾಕ್ಸ್ ತೋರಿಸುವಾಗ ಸುಮಾರು ೨೦ ಮನೆಗಳ ಬಗ್ಗೆ ಸರಿಯಾ ವ್ಯವಹಾರವಾಗಿಲ್ಲ ಎಂದು ಅಂತಹ ಮನೆಗಳನ್ನು ಕೇಂದ್ರ ಸರಕಾರವೇ ಕೊಂಡುಕೊಳ್ಳುತ್ತದೆ ಎಂದು ಅವರಿಗೆಲ್ಲಾ ನೋಟೀಸು ಕೊಟ್ಟಿದೆ ಎಂದು ಕೇಳಿದ್ದೇನೆ. ಆದುದರಿಂದ ಇಲ್ಲಿಯೂ ಕೂಡ ರಿಟ್ರಾಸ್‌ಪೆಕ್ಟೀವ್ ಆಗಿ ಈ ಕಾನೂನು ತರಬಹುದು ಎಂದು ನನ್ನ ಖಚಿತವಾದ ಅಭಿಪ್ರಾಯ. ಏಕೆಂದರೆ ನನಗೆ ಗೊತ್ತಿರುವಂತೆ ಅನೇಕ ಅವ್ಯವಹಾರಗಳು ಬೆಂಗಳೂರಿದಲ್ಲಿ ನಡೆದಿದೆ. ಇದರಿಂದ ಸರ್ಕಾರಕ್ಕೆ ಬರಬೇಕಾದ ಹಣ ಬರದೆ ಬಹಳಷ್ಟು ಹಾನಿಯಾಗಿದೆ. ಬೋಗಸ್ ಸೊಸೈಟಿಗಳು ಬೆಂಗಳೂರಿನಲ್ಲಿ ಬಹಳಷ್ಟು ಹುಟ್ಟಿಕೊಂಡಿವೆ. ಈ ಸೊಸೈಟಿಯವರು, ಭೂಸಂಧಾರಣಾ ಕಾನೂನಿನಲ್ಲಿರತಕ್ಕಂಥ ಕೆಲವು ರಿಯಾಯಿತಿಗಳನ್ನು ದುರುಪಯೋಗಪಡಿಸಿಕೊಂಡಿದ್ದಾರೆ ವ್ಯವಸಾಯದ ಜಮೀನನ್ನು ಕೊಂಡುಕೊಂಡು ಅವುಗಳನ್ನು ಸೈಟ್‌ಗಳನ್ನಾಗಿ ಮಾಡಿ ಬೇರೆಯವರಿಗೆ ಲಾಭಕ್ಕೆ ಮಾರುವುದರ ಮೂಲಕ ಬೇಕಾದಷ್ಟು

ಹಣತಿಂದಿದ್ದಾರೆ. ಇದರಿಂದ ಸರ್ಕಾರಕ್ಕೆ ಬರಬೇಕಾದಂಥ ಸಹಸ್ರಾರು ರೂಪಾಯಿಗಳಷ್ಟು ವರಮಾನಕಡಿಮೆ ಯಾಗಿದೆ. ಇದಕಾರಣ ಇದನ್ನು ತಪ್ಪಿಸುವ ಬಗ್ಗೆ ಸರ್ಕಾರದವರು ಧೀರ್ಘವಾಗಿ ಯೋಚನೆ ಮಾಡಬೇಕಾದಂಥ ಪರಿಸ್ಥಿತಿ ಬಂದಿದೆ ಎಂಬುದನ್ನು ನಾನು ಹೇಳುತ್ತಿದ್ದೇನೆ. ಇಂದು ಯಾವುದೇ ವ್ಯವಹಾರ ನಡೆದರೂ ಸಹ ಅದು ಸಬ್‌ರಿಜಿಸ್ಟ್ರಾರ್ ಕಛೇರಿಯಲ್ಲಿ ರಿಜಿಸ್ಟರ್‌ಆಗುತ್ತದೆ. ಇದರಿಂದ ಅಲ್ಲಿ ಕೆಲಸ ಮಾಡುವವರಿಗೆ ಹೆಚ್ಚಿನ ಲಾಭವಾಗುತ್ತಿದೆ. ಮಾನ್ಯ ಮಂತ್ರಿಗಳು ಸಹ ಒಂದೆರಡು ಸಲ ಅಲ್ಲಿಗೆ ಹೋಗಿ ಅಲ್ಲಿನ ಅಧಿಕಾರಿಗಳಲ್ಲಿ ಹೆಚ್ಚಿನ ಹಣವಿತ್ತು ಎಂಬುದನ್ನು ಪತ್ತೆ ಮಾಡಿದ್ದಾರೆ. ಇದೇ ಕಾರಣದಿಂದ ಅಲ್ಲಿನ ಅಧಿಕಾರಿಗಳು ಕಛೇರಿಗೆ ಬರುವಾಗ ಹೆಚ್ಚಿನ ಹಣ ತೆಗೆದುಕೊಂಡು ಬರಬಾರದೆಂದು ಹೇಳಿದ್ದಾರೆ. ಇವರ ವಿರುದ್ಧ ಅವರು ರಿಟ್ ಹೋಗಬೇಕೆಂದಿದ್ದಾರೆಂದು ನಾನು ಕೇಳಿದ್ದೇನೆ ಭೂಸುಧಾರಣಾ ಕಾನೂನು ಪ್ರಕಾರ ಕೆಲವು ಜಮೀನನ್ನು ಮಾರಾಟ ಮಾಡುವುದಕ್ಕೆ ಅವಕಾಶವಿಲ್ಲದಿದ್ದರೂ ಸಹ ಬೇರೆ ಯಾವುದೋ ಕಾರಣವನ್ನು ತೋರಿಸಿ ಮಾರಾಟ ಮಾಡಲಾಗುತ್ತಿದೆ. ಕಾಯಿದೆಯನ್ನು ಜಾರಿಗೆ ತರುವ ಅಧಿಕಾರಿಗಳೇ ಇದಕ್ಕೆಲ್ಲಾ ಅವಕಾಶ ಮಾಡಿಕೊಡುತ್ತಿದ್ದಾರೆ. ಅಧಿಕಾರಿಗಳು ನಿಷ್ಪಾಪಿಗಳಾಗಿರದಿದ್ದರೆ ಕಾರಣ ಇಷ್ಟೆಲ್ಲಾ ಅವ್ಯವಹಾರಗಳು ನಡೆಯುತ್ತಿವೆ ಈ ರೀತಿ ಕಾನೂನಿಗೆ ವಿರುದ್ಧವಾಗಿ ರಿಜಿಸ್ಟರ್ ಆಗುವುದಕ್ಕೆ ಸಹಾಯ ಮಾಡುವಂತಹ ಸಬ್‌ರಿಜಿಸ್ಟ್ರಾರ್ ಅವರನ್ನು ಸಸ್ಪೆಂಡ್ ಮಾಡಬೇಕು ಇಲ್ಲವೇ ಡಿಸ್‌ಮಿಸ್ ಮಾಡಬೇಕೆಂದು ಹೇಳುತ್ತೇನೆ. ಅದಕ್ಕೆ ಅವಕಾಶವಾಗುವಂತೆ ಒಂದು ರೂಲ್ಸ್‌ನ್ನು ಮಾಡಬೇಕೆಂದು ಹೇಳುತ್ತೇನೆ. ಇಂದು ಅನುಕೂಲಸ್ಥರು ತಮ್ಮ ಆಸ್ತಿಯನ್ನು ಬೇರೆಯವರಿಗೆ ಮಾರಾಟ ಮಾಡುವ ಸಂದರ್ಭದಲ್ಲಿ ಸಂಬಂಧಪಟ್ಟ ಸಬ್-ರಿಜಿಸ್ಟ್ರಾರ್ ಕಛೇರಿಗೆ ಹೋಗಬೇಕಾಗಿದೆ. ಅಲ್ಲಿಗೆ ಹೋಗುವುದಕ್ಕೆ ಬದಲು ಅವರನ್ನೇ ತಮ್ಮ ಮನೆಗೆ ಕರೆದುಕೊಂಡು ಹೋಗಿ ಅವರಿಗೆ ಕೊಡಬೇಕಾದ ಮರ್ಯಾದೆಗಳನ್ನು ಕೊಟ್ಟು ತಮ್ಮ ಕೆಲಸವನ್ನು ಮಾಡಿಸಿಕೊಳ್ಳುತ್ತಿದ್ದಾರೆ. ಅರ್ಬನ್ ಪ್ರಾಪರ್ಟಿ ಮೇಲೆ ಸರ್ಕಾರದವರು ಸೀಲಿಂಗ್ ತರುತ್ತಾರೆಂದು ತಿಳಿದಬಂದಾಗಲೇ ಅನೇಕ ಜನರು ತಮ್ಮಲ್ಲಿರುವ ಹೆಚ್ಚಿನ ಆಸ್ತಿಗಳನ್ನು ಬೇರೆಯವರಿಗೆ ಮಾರಾಟ ಮಾಡಿಬಿಟ್ಟಿದ್ದಾರೆ. ಈಗಲೂ ಮಾಡುತ್ತಿದ್ದಾರೆ. ಇದರ ಬಗ್ಗೆ ಸರ್ಕಾರದವರು ಸ್ವಲ್ಪ ಎಚ್ಚರಿಗೆ ವಹಿಸದೇ ಹೋದರೆ ಮುಂದೆ ಈ ಬಗ್ಗೆ ಸರ್ಕಾರದವರು ಕಾಯಿದೆ ಮಾಡಿದರೂ ಸಹ ಅದರಿಂದ ಹೆಚ್ಚಿನ ಅನುಕೂಲವಾಗುವುದಿಲ್ಲವೆಂದು ಹೇಳುತ್ತೇನೆ. ಈಗ ಈ ಬಿಲ್‌ನಲ್ಲಿ ವ್ಯಾಲ್ಯೂಯೇಷನ್‌ಲ್ಲಿ ಏನಾದರೂ ವ್ಯತ್ಯಾಸ ಕಂಡುಬಂದರೆ, ಆ ವ್ಯತ್ಯಾಸದಷ್ಟು ಟ್ಯಾಕ್ಸ್ ತೆಗೆದುಕೊಳ್ಳಬೇಕೆಂದು ಇಲ್ಲಿ ಹೇಳಲಾಗಿದೆ. ಇದರ ಜೊತೆಗೆ ಪೆನಾಲ್ಟಿ ಕ್ಲಾಜ್ ಒಂದನ್ನು ಸೇರಿಸಬೇಕೆಂದು ನಾನು ಸಲಹೆ ಮಾಡುತ್ತೇನೆ. ಯಾರು ಎಷ್ಟು ಹಣವನ್ನು ಉಳಿಸಿಕೊಂಡಿರುತ್ತಾರೋ ಅವರ ಮೇಲೆ ಇಂತಿಷ್ಟು ಪರ್ಸೆಂಟೇಜ್ ಪೆನಾಲ್ಟಿ ಹಾಕಬೇಕು ಇಲ್ಲಿ ವ್ಯತ್ಯಾಸ ಎಷ್ಟಿದೆಯೋ ಅಷ್ಟಕ್ಕೆ ಮಾತ್ರ ಟ್ಯಾಕ್ಸ್ ಕಟ್ಟಬೇಕೆಂದು ಹೇಳಿದ್ದೀರಿ; ಆದರೆ ಅಪರಾಧ ಮಾಡಿದ್ದಕ್ಕೆ ಶಿಕ್ಷೆ ಬೇಡವೇ? ಇದಕ್ಕೆ ಅವಕಾಶ ಮಾಡಿದ್ದೇ ಆದರೆ ಇನ್ನು ಮುಂದೆ ಇಂತಹ ಕೇಸ್‌ಗಳು ನಡೆಯುವುದಕ್ಕೆ ಅವಕಾಶವಿಂದಿಲ್ಲವೆಂದು ಹೇಳುತ್ತೇನೆ. ಇದರ ಜೊತೆಗೆ ಇನ್ನು ಮುಂದೆ ರಿಜಿಸ್ಟರ್ ಮಾಡಿಸುವುದಕ್ಕೆ ಯಾರಾದರೂ ಬಂದಾಗ, ಅದರ ವ್ಯಾಲ್ಯೂವನ್ನು ಸರಿಯಾಗಿ ಕಾಣಿಸಲಾಗಿದೆಯೋ ಎಂಬ ಬಗ್ಗೆ ಒಂದು ಸರ್ಟಿಫಿಕೇಟ್‌ನ್ನು ಸಹ ಪತ್ರದೊಂದಿಗೆ ತೆಗೆದುಕೊಂಡು ಬರುವಂತೆ ರಿಜಿಸ್ಟ್ರಾರ್ ಅವರು ಸಂಬಂಧಪಟ್ಟ ಪಾರ್ಟಿಗೆ ತಿಳಿಸುವಂತೆ ಸರ್ಕಾರದವರು ಹೇಳಬೇಕು. ಆಗ ಅಂಡರ್-ವ್ಯಾಲ್ಯುಯೇಷನ್ ಮಾಡುವುದು ತಪ್ಪುತ್ತದೆ. ಇದೇ ಸಮಯದಲ್ಲಿ ನನ್ನ ಒಂದು ಅರಿಕೆ ಏನೆಂದರೆ, ತಂದೆಯಾದವನು ತನ್ನ ಗಂಡುಮಕ್ಕಳಿಗೆ ಆಗಲೀ, ಹೆಣ್ಣು ಮಕ್ಕಳಿಗೆ ಆಗಲೀ, ತನ್ನ ಆಸ್ತಿಯನ್ನು ಬರೆದು ಕೊಡುವಾಗ ಸ್ಟಾಂಪ್ ಡ್ಯೂಟಿ ವಿಚಾರದಲ್ಲಿ ಸ್ವಲ್ಪ ರಿಯಾಯಿತಿ ಕೊಟ್ಟರೆ ಅನುಕೂಲವಾಗುತ್ತದೆಂದು ಹೇಳುತ್ತೇನೆ. ಇದರ ಬಗ್ಗೆ ಸರ್ಕಾರದವರು ಯೋಚನೆ ಮಾಡಬೇಕು. ಸರ್ಕಾರದವರು ಒಂದು ಕಡೆಯಲ್ಲಿ ನಾನಾ ರೀತಿಯಿಂದ ತೆರಿಗೆ ಹೆಚ್ಚು ಮಾಡಲು ಪ್ರಯತ್ನ ಪಟ್ಟರೆ ಜನರು ಅದನ್ನು ತಪ್ಪಿಸಿಕೊಳ್ಳುವುದಕ್ಕೆ ಇನ್ನೊಂದು ಕಡೆಯಲ್ಲಿ ಪ್ರಯತ್ನ ಮಾಡುತ್ತಾರೆ. ಮಾನ್ಯ ಅರ್ಥ ಮಂತ್ರಿಗಳು ತೆರಿಗೆ ಚಾಟ್ಸ್ ಮಾಡಿದಂತೆ ಅದನ್ನು ಕಡಿಮೆ ಮಾಡಿಕೊಳ್ಳಲು ಜನರು ಕೃತ್ರಿಮವಾದ ಮಾರ್ಗಗಳನ್ನು ಹುಡುಕುತ್ತಾರೆ. ಆಗ ಅನಾಚಾರ ಹುಟ್ಟಿಕೊಳ್ಳುತ್ತದೆ. ಸರ್ಕಾರದವರು ಚಾಪೆ ಕೆಳಗೆ ತೂರುವುದಕ್ಕೆ ಪ್ರಯತ್ನ ಪಟ್ಟರೆ ಜನರು ರಂಗೋಲಿ ಕೆಳಗೆ ತೂರುತ್ತಾರೆ. ಸರ್ಕಾರಕ್ಕಿಂತ, ತಜ್ಞರಿಗಿಂತ ಜನರೇ ಬಹಳ ಗಟ್ಟಿಗರಾಗಿಬಿಟ್ಟಿದ್ದಾರೆ. ತೆರಿಗೆಯಿಂದ ಯಾವ ರೀತಿ ತಪ್ಪಿಸಿಕೊಳ್ಳಬೇಕೆಂಬುದನ್ನು ಅವರು ಚೆನ್ನಾಗಿ ತಿಳಿದುಕೊಂಡಿದ್ದಾರೆ ಸರ್ಕಾರದವರು ಒಂದು ಕಾಯಿದೆ ಮಾಡಿದರೆ ಅದಕ್ಕೆ ಪ್ರತಿಯಾದ ಕಾಯಿದೆ ಅವರಲ್ಲಿರುತ್ತದೆ, ಮುಖ್ಯವಾಗಿ ಸರ್ಕಾರದವರು ಆಡಳಿತದಲ್ಲಿ ಒಂದು ನಿಷ್ಠೆ ಪಂತ್ರ ಶ್ರದ್ಧೆಯಿಂದ ಕೆಲಸವಾಗುವಂತೆ ಏರ್ಪಾಡು ಮಾಡದೇ ಹೋದರೆ ಯಾವ ಹೊಸ ಕಾಯಿದೆಗಳನ್ನು ಮಾಡಿದರೂ ಸಹ ಅದರಿಂದ ಯಾವ ಹೆಚ್ಚಿನ ಪ್ರಯೋಜನವೂ ಆಗುವುದಿಲ್ಲವೆಂದು ಹೇಳುತ್ತೇನೆ. ಮುಖ್ಯವಾಗಿ ಸಬ್ ರಿಜಿಸ್ಟ್ರಾರ್ ಕಛೇರಿಯನ್ನು ಭದ್ರ ಮಾಡಬೇಕಾಗಿದೆ ಅಲ್ಲಿ ಇಪ್ಪತ್ತಿನ ದಿವಸ ದುಡ್ಡು ಕೊಡುವ ಶಕ್ತಿಯಿರುವವರು ನಮ್ಮಂತಹ ಎಂ. ಎಲ್. ಎ. ಆದವರು ಏನಾದರೂ ಪತ್ರವನ್ನು ರಿಜಿಸ್ಟರ್ ಮಾಡಿಸಿದರೆ, ಆದರ ಮಾತನೆಯು

ದಿವಸವೇ ರಿಜಿಸ್ಟ್ರ್ ಆದ ಪತ್ರವನ್ನು ಕೊಡುತ್ತಾರೆ. ಇಲ್ಲದಿದ್ದರೆ, ೮—೧೦ ದಿವಸಗಳ ನಂತರ ಕೊಡುತ್ತಾರೆ ವ್ಯಾಲ್ಯುಯೇಷನ್ ಬಗ್ಗೆ ಸರ್ಕಾರದವರು ಈಗ ಕ್ರಮ ಕೈಕೊಳ್ಳುತ್ತಿದ್ದಾರೆ; ಆದರೆ ಕಳೆದ ಹತ್ತಾರು ವರ್ಷಗಳಿಂದ ಇದು ನಡೆದುಕೊಂಡು ಬಂದಿದೆ ವ್ಯಾಲ್ಯುಯೇಷನ್ ಕಡಿಮೆ ತೋರಿಸಿದ ಪ್ರಕರಣಗಳಲ್ಲಿ ಮಾಮೂಲಿ ತೆಗೆದುಕೊಂಡು ರಿಜಿಸ್ಟರ್ ಮಾಡಿದ್ದಾರೆ. ಇದನ್ನು ತಪ್ಪಿಸಲು ಈ ಬಿಲ್ಲನ್ನು ತಂದಿದ್ದಾರೆ. ಅಂಡರ್ ವ್ಯಾಲ್ಯುಯೇಷನ್ ತಪ್ಪಿಸಬೇಕೆಂಬುದು ಸರ್ಕಾರದ ಇಚ್ಛೆಯಾಗಿದ್ದರೆ, ಪತ್ರವನ್ನು ಜೊತೆಯಲ್ಲಿಯೇ ವ್ಯಾಲ್ಯುಯೇಷನ್ ಬಗ್ಗೆ ಒಂದು ಸರ್ಟಿಫಿಕೇಟನ್ನು ಸಹ ಮಾಡಿಸಬೇಕೆಂದು ತಿಳಿಸಬೇಕು. ಆಗ ಇಂತಹ ಜಟಿಲ ಸಮಸ್ಯೆಗಳು ಬರುವುದಿಲ್ಲ; ಅಂಡರ್ ವ್ಯಾಲ್ಯುಯೇಷನ್ ಆಗಿದೆ ಎಂಬುದು ತಿಳಿದು ಬಂದಾಗ, ಅದನ್ನು ಸಬ್‌ರಿಜಿಸ್ಟ್ರಾರ್ ಆದವರು ಜಿಲ್ಲಾಧಿಕಾರಿಗಳಿಗೆ ತಿಳಿಸಬೇಕೆಂದು ಹೇಳುವುದಾದರೆ, ಕಳ್ಳನಿಗೆ ಆಧಿಕಾರ ಕೊಟ್ಟಂತೆ ಆಗುತ್ತದೆ. ಈ ಕ್ರಮ ಸರಿಯೇ ಎಂಬುದನ್ನು ತಾವು ಸ್ವಲ್ಪ ಯೋಚನೆ ಮಾಡಬೇಕು. ಸಬ್-ರಿಜಿಸ್ಟ್ರಾರ್ ಆದವರು ಇಂತಹ ಪ್ರಕರಣಗಳನ್ನು ಜಿಲ್ಲಾಧಿಕಾರಿಗಳ ಗಮನಕ್ಕೆ ತಂದಮೇಲೆ ಆವರು ಸಂಬಂಧಪಟ್ಟವರಿಗೆ ಷೋಕಾಸ್ ನೋಟೀಸ್ ನೀಡುತ್ತಾರೆ. ಅಂದರೆ ಇಲ್ಲಿ ಜಿಲ್ಲಾಧಿಕಾರಿಯವರೇ ನೇರವಾಗಿ ಆದನ್ನು ನೀಡುವುದಿಲ್ಲ; ಆವರ ಕೈಕೆಳಗಿನ ಅಧಿಕಾರಿಗಳು ಈ ಕೆಲಸ ಮಾಡುತ್ತಾರೆ ಇಂತಹ ಸಂದರ್ಭಗಳಲ್ಲಿ ಸಂಬಂಧಪಟ್ಟ ಪಾರ್ಟಿಗಳು ಕೆಳಗಿನ ಅಧಿಕಾರಿಗಳನ್ನೇ ಸರಿಮಾಡಿಕೊಂಡರೆ ಏನು ಮಾಡುವುದು? ಅಂದರೆ ಪೂಜಾರಿಯಿಂದಲೇ ವರ ತೆಗೆದುಕೊಂಡಾಬಿಟ್ಟರೆ ಏನು ಮಾಡುವುದು ? ಇದಕ್ಕೆಲ್ಲಾ ಅವಕಾಶವಾಗದಂತೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಜೊತೆಗೆ ಇಲ್ಲಿಯವರೆಗೆ ನಡೆದ ವ್ಯವಹಾರಗಳನ್ನು ರಿವ್ಯೂ ಮಾಡುವುದಕ್ಕೆ ಡಿ.ಸಿ. ಆವರಿಗೆ ಆಧಿಕಾರ ಕೊಡಬೇಕು ಮತ್ತು ರ್ಯಾಂಡಮ್ ಆಗಿ ಚೆಕ್ ಮಾಡುವುದಕ್ಕೂ ಸಹ ಒಂದು ವ್ಯವಸ್ಥೆ ಇರಬೇಕು ಆಗ ಅಂಡರ್ ವ್ಯಾಲ್ಯುಯೇಷನ್ ಮಾಡುವುದು ಕಡಿಮೆಯಾಗುತ್ತದೆ.

ಇನ್ನು ಇಲ್ಲಿ ಮಾರ್ಕೆಟ್ ವ್ಯಾಲ್ಯು ಮೇಲೆ ಬೆಲೆ ನಿಗದಿಮಾಡಬೇಕೆಂದು ಹೇಳಲಾಗಿದೆ. ಆದರೆ ಮಾರ್ಕೆಟ್ ವ್ಯಾಲ್ಯುವನ್ನು ಯಾವ ರೀತಿ ನಿಗದಿಮಾಡಬೇಕು ಎಂಬುದನ್ನು ಇಲ್ಲಿ ಹೇಳಿಲ್ಲ; ಈ ಬಗ್ಗೆ ಒಂದು ಗೈಡ್ ಲೈನ್ ಹಾಕಿಕೊಡಬೇಕು. ಈಗ ಉದಾಹರಣೆಗೆ ಹೇಳಬೇಕೆಂದರೆ, ಚಿಕ್ಕಪೇಟೆಯಲ್ಲಿ ಚದರ ಗಜ ಒಂದಕ್ಕೆ ೫ ಸಾವಿರ ರೂಪಾಯಿ ಬೆಲೆ ಇದ್ದರೆ. ಚಿಕ್ಕಪೇಟೆಯ ಹಿಂದೆ ಇರುವಂತಹ ಜಾಗಕ್ಕೆ ಚದರ ಗಜ ಒಂದಕ್ಕೆ ೫೦೦ ರೂಪಾಯಿ ಆಗಬಹುದು; ಆದಕಾರಣ ಈ ಬಗ್ಗೆ ಒಂದು ಗೈಡ್ ಲೈನ್ ಹಾಕಿಕೊಟ್ಟರೆ ಸ್ವಲ್ಪ ಅನುಕೂಲವಾಗುತ್ತದೆ. ಆ ರೀತಿ ಮಾಡದೆ ಮಾರ್ಕೆಟ್ ವ್ಯಾಲ್ಯು ಎಂದರೆ ಅದನ್ನು ಸುಲಭವಾಗಿ ತಪ್ಪಿಸಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಆದಕಾರಣ ಒಂದು ಗೈಡ್ ಲೈನ್ ಹಾಕುವುದು ಒಳ್ಳೆಯದೆಂದು ನನಗನ್ನಿಸುತ್ತದೆ.

4-00 P.M.

ಸ್ಟ್ಯಾಂಪ್ ಡ್ಯೂಟಿಯ ಬಗ್ಗೆ ಅನುಸರಿಸಬೇಕಾದ ನಿಯಮಗಳ ಬಗ್ಗೆ ಷೆಡ್ಯೂಲ್‌ನಲ್ಲಿ ಕೊಟ್ಟಿದ್ದಾರೆ. ಆದ್ದರಿಂದ ನಾನು ತಮ್ಮ ಗಮನಕ್ಕೆ ತರುವುದು ಇಷ್ಟೆ. ಈ ಒಂದು ಕಾನೂನನ್ನು ರೆಟ್ರಾಸ್ಪೆಕ್ಟೀವ್ ಎಫೆಕ್ಟ್‌ಗೆ ಕೊಟ್ಟರೆ ಮಾತ್ರ ಇದರಿಂದ ಸರ್ಕಾರಕ್ಕೆ ಅನುಕೂಲವಾಗುತ್ತದೆ. ಎರಡನೆಯದಾಗಿ ರಿಜಿಸ್ಟ್ರೇಷನ್ ಮಾಡುವುದರಲ್ಲಿ ಭದ್ರತೆಯನ್ನು ಮಾಡಿ ಫೀಜು ಸರಿಯಾಗಿ ವಸೂಲು ಆಗುವಹಾಗೆ ಮಾಡಿದರೆ ಅದು ಸರಿಯಾಗಿ ನಡೆಯುತ್ತದೆ. ಇದರ ಬಗ್ಗೆ ಒಂದು ರ್ಯಾಂಡಂ ಚೆಕ್ ಮಾಡಬೇಕು. ರಿಜಿಸ್ಟ್ರೇಷನ್ನಿಗಿಂತ ಮೊದಲೇ ಚೆಕ್ ಮಾಡಬೇಕು. ಇದರ ಬಗ್ಗೆ ನಾನು ಒಂದು ತಿದ್ದುಪಡಿಯನ್ನು ಬರೆದು ಕಳುಹಿಸಿದೆನೆ. ಆದ್ದರಿಂದ ಇದನ್ನು ಸರ್ಕಾರದವರು ಯೋಚನೆ ಮಾಡಬೇಕು. ನಾವು ಅನೇಕ ತೆರಿಗೆಗಳನ್ನು ಹಾಕಬೇಡಿ ಎಂದು ಹೇಳುತ್ತೇನೆ. ಆದರೆ ಇಂಥಾದ್ದಕ್ಕೆ ಮಾತ್ರ ಗಮನ ಕೊಡದಿದ್ದರೆ ತೊಂದರೆಯಾಗುತ್ತವೆ. ಬೇಕಾದರೆ ಪೆನಾಲ್ಟಿ ಹಾಕಿ. ಇಷ್ಟು ಹೇಳಿ ಈ ಮಸೂದೆಯನ್ನು ಪಾಸು ಮಾಡುವುದರಲ್ಲಿ ನಮ್ಮ ಅಭ್ಯಂತರ ಇಲ್ಲ ಎಂದು ಹೇಳುತ್ತೇನೆ.

† ಶ್ರೀ ಎಂ ವೆಂಕಟಲಿಂಗಯ್ಯ (ಕೃಷ್ಣರಾಜು).—ಮಾನ್ಯ ಅಧ್ಯಕ್ಷರೇ ಮಾನ್ಯ ಕಂದಾಯ ಸಚಿವರು ಈ ಸಭೆಯವರೆಗೆ ಬಂದಿರುವ ಕರ್ನಾಟಕ ಸ್ಟ್ಯಾಂಪ್ ಅಮೆಂಡ್‌ಮೆಂಟ್ ಮಸೂದೆಯ ವಿಷಯದಲ್ಲಿ ನಾನು ಕೆಲವು ಸಲಹೆಗಳನ್ನು ಕೊಡುವುದಕ್ಕೆ ಇಚ್ಛಿಪಡುತ್ತೇನೆ. ಪಿಸ್ತಿಗಳನ್ನು ಮಾರಾಟ ಮಾಡುವಾಗ ಬಹಳ ಕಡಿಮೆ ಬೆಲೆಯನ್ನು ತೋರಿಸಿ ಸ್ಟ್ಯಾಂಪ್ ವ್ಯಾಲ್ಯುಯೇಷನ್ ಕಡಿಮೆ ಮಾಡಿಸಿ ಆವರು ಕೊಡಬೇಕಾದ ಫೀಜಿನಿಂದ ತಪ್ಪಿಸಿಕೊಳ್ಳುತ್ತಾರೆ. ಇಂಥಾದ್ದನ್ನು ತಪ್ಪಿಸುವುದಕ್ಕೋಸ್ಕರ ಈ ಮಸೂದೆಯನ್ನು ಮಾನ್ಯ ಮಂತ್ರಿಗಳು ಈ ಸಭೆಯಲ್ಲಿ ತಂದಿದ್ದಾರೆ, ಇದರಿಂದ ಸರ್ಕಾರಕ್ಕೆ ನಷ್ಟ ಆಗುತ್ತಾ ಇದ್ದುದರಿಂದ ಈ ಮಸೂದಾ ಕಾನೂನನ್ನು ತಂದಿದ್ದಾರೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಆವರು ಇದನ್ನು ತಂದಿರತಕ್ಕ ಉದ್ದೇಶ ಸರ್ಕಾರಕ್ಕೆ ನಷ್ಟವಾಗುವುದನ್ನು ತಪ್ಪಿಸುವುದಕ್ಕೆ ಏನು ಕ್ರಮತೆಗೆದುಕೊಳ್ಳ

ಬೇಕೋ ಅದನ್ನು ತೆಗೆದುಕೊಳ್ಳುವುದರಲ್ಲಿ ನಾನು ಅದನ್ನು ಸ್ವಾಗತಿಸುತ್ತೇನೆ. ಜನಗಳು ಸ್ಟಾಂಪ್ ವ್ಯಾಲ್ಯೂಯೇಷನ್ನಿದ ತಪ್ಪಿಸಿಕೊಳ್ಳುವುದನ್ನು ತಡೆಗಟ್ಟಬೇಕಾದರೆ ಅದರಲ್ಲಿ ಅಧಿಕಾರಿಗಳದು ಮುಖ್ಯ ಕರ್ತವ್ಯ. ಏತಕ್ಕೆಂದರೆ ಅಧಿಕಾರಿಗಳ ಸಪೋರ್ಟ್ ಇಲ್ಲದೆ ಜನಗಳು ಈ ಸ್ಟಾಂಪ್ ತೆರಿಗೆಯಿಂದ ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲ, ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ನಾವು ಕಂಡಹಾಗೆ ಲಂಚರುಷವತ್ತುಗಳು ತಾಂಡವಾಡುತ್ತಿದೆ. ಎಲ್ಲಕಿಂತ ಹೆಚ್ಚಿನ ರೀತಿಯಲ್ಲಿ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಭ್ರಷ್ಟಾಚಾರವಿದೆ. ಒಂದು ವಿಷಯದಲ್ಲೂ ಇಷ್ಟಿಷ್ಟು ಎಂದು ಮಾಮೂಲು ಮಾಡಿದ್ದಾರೆ ಆಫೀಸು ಮುಗಿದ ಮೇಲೆ ಸಾಮಾನ್ಯಕಾಲ ಸಬ್ ರಿಜಿಸ್ಟ್ರಾರ್ ಅವರು ಮತ್ತು ಅವರ ಸ್ಟಾಫ್‌ನವರು ಮಾಮೂಲಿನ ಮುಖಾಂತರಬಂದ ಹಣವನ್ನು ಹಂಚಿಕೊಳ್ಳುತ್ತಾ ಇರತಕ್ಕ ಸನ್ನಿವೇಶವನ್ನು ನಾವು ನೋಡಿದ್ದೇವೆ. ಈಗ ಈ ಬಗ್ಗೆ ಆ ಅಧಿಕಾರಿಗಳಿಗೆ ಅಧಿಕಾರವನ್ನು ಕೊಟ್ಟರೆ ಸ್ಟಾಂಪ್ ವ್ಯಾಲ್ಯೂಯೇಷನ್ ಕಡಿಮೆ ಹಾಕ್ತಿದ್ದರೆ ಅದನ್ನು ಕಂಡುಹಿಡಿದು ನ್ಯಾಯವಾಗಿ ಬರಬೇಕಾದ ಸ್ಟಾಂಪ್ ಪೀಜನ್ನು ವಸೂಲು ಮಾಡುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಡೆಪ್ಯುಟಿ ಕಮಿಷನರಿಗೆ ಬರೆಯಬೇಕು ಎಂದು ಅವರಿಗೆ ಅವಕಾಶವನ್ನು ಕೊಟ್ಟಿರುವುದು ಅವರು ಲಂಚವನ್ನು ವಸೂಲು ಮಾಡುವುದು ಜಾಸ್ತಿಯಾಗುತ್ತದೆ ಅವರು ಸರ್ಕಾರದ ದೃಷ್ಟಿಯಲ್ಲಿ ನಿಷ್ಪಕ್ಷಪಾತತೆಯಿಂದ ಕೆಲಸ ಮಾಡುವುದಕ್ಕೆ ಅವಕಾಶ ಇಲ್ಲ. ಅವರು ಜನಗಳನ್ನು ಹೆರಾಸ್ ಮಾಡಿ ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆಯೋ ಹೊರತು ಸರ್ಕಾರದವರು ನಿಜವಾಗಿ ಉದ್ದೇಶ ಪಟ್ಟಿರುವ ಹಾಗೆ ನಿಷ್ಪಕ್ಷಪಾತತೆಯಿಂದ ಸರ್ಕಾರಕ್ಕೆ ಹಣ ಬರುವ ಹಾಗೆ ಅವಕಾಶ ಮಾಡಿಕೊಡುತ್ತಾರೆ ಎನ್ನುವ ನಂಬಿಕೆ ನನಗೆ ಇಲ್ಲ. ಆದಕ್ಕಾಗಿ ನಾನು ಹೇಳುವುದೇನೆಂದರೆ ಅಧಿಕಾರಿಗಳ ಕೈಗೆ ಈ ಒಂದು ಅಧಿಕಾರವನ್ನು ಕೊಟ್ಟು ಅಂಡರ್ ವ್ಯಾಲ್ಯೂಯೇಷನ್ ಮಾಡಿರುವುದನ್ನು ಅವರು ಕಂಡುಹಿಡಿಯುವುದಕ್ಕೆ ಅವಕಾಶ ಕೊಡುವುದರ ಬದಲು ಒಂದೊಂದು ಸರಿಯಾದಲ್ಲಿ ಇಷ್ಟಿಷ್ಟು ಸ್ಟಾಂಪ್ ವ್ಯಾಲ್ಯೂಯೇಷನ್ ಕೊಡಬೇಕು ಎಂದು ಫಿಕ್ಸ್ ಮಾಡಬೇಕು. ಎಕ್ಸ್‌ಟೆನ್ಷನ್ ಏರಿಯಾದಲ್ಲಿ ಇಷ್ಟು ಸ್ಟಾಂಪ್ ವ್ಯಾಲ್ಯೂಯೇಷನ್ ಒಲ್ಡ್ ಟೌನ್ ನಲ್ಲಿ ಇಷ್ಟು ಸ್ಟಾಂಪ್ ಡ್ಯೂಟಿ, ಬಿಜಿನೆಸ್ ಏರಿಯಾದಲ್ಲಿ ಇಷ್ಟು ಸ್ಟಾಂಪ್ ಡ್ಯೂಟಿ ಕೊಡಬೇಕು. ಎಂದು ಫಿಕ್ಸ್ ಮಾಡಬೇಕು, ಈ ರೀತಿ ಸ್ಟಾಂಪ್ ವ್ಯಾಲ್ಯೂಯೇಷನ್ ಅನ್ನು ಟೆಕ್ನಿಕಲ್ ಫೀಪಲ್‌ನಿಂದ ತಜ್ಞರಿಂದ ಇಷ್ಟು ಸಾವಿರ ರೂಪಾಯಿಗಳಿಂದ ಇಷ್ಟು ಸಾವಿರ ರೂಪಾಯಿಗಳವರೆಗೆ ಇಷ್ಟಿಷ್ಟು ಎಂದು ತಕ್ತಾರಿಸಿ ಮನೆಗೆ ಇಷ್ಟು ಫೀಜು, ಖಾಲಿ ಸೈಟಿಗೆ ಇಷ್ಟು ಪೆಂಚಿನ ಮನೆಗೆ ಇಷ್ಟು ಎಂದು ಗೊತ್ತು ಮಾಡಿ ರಿಜಿಸ್ಟ್ರೇಷನ್ನಿಗೆ ಬಂದಾಗ ಎಲ್ಲಾ ಕೆಟಗರಿ ಪ್ರಾಪರ್ಟಿಗೂ ಕೂಡ ಇಂತಿಂಥಾ ಏರಿಯಾದಲ್ಲಿ ಇಷ್ಟಿಷ್ಟು, ಮನೆಗಳಿಗೆ ಇಷ್ಟು ಸೈಟುಗಳಿಗೆ ಚದುರಗಜಕ್ಕೆ ಇಷ್ಟು ಎಂದು ಫಿಕ್ಸ್ ಮಾಡಿದರೆ ಜನಗಳಿಗೆ ಹೆರಾಸ್‌ಮೆಂಟ್ ಇರುವುದಿಲ್ಲ. ೫ ಸಾವಿರ ದಿಂದ ೫೦ ಸಾವಿರ ರೂಪಾಯಿಗಳನಿರೆಗೂ ಇಂತಿಂಥಾ ಏರಿಯಾದಲ್ಲಿ ಇಷ್ಟಿಷ್ಟು ಸ್ಟಾಂಪ್ ವ್ಯಾಲ್ಯೂಯೇಷನ್ ಎಂದು ಗೊತ್ತುಮಾಡಬೇಕು. ಅಂಥಾ ಏರಿಯಾಗಳ ಪ್ರಾಪರ್ಟಿ ರಿಜಿಸ್ಟ್ರೇಷನ್ನಿಸಗೆ ಬಂದಾಗ ಸರ್ಕಾರದವರಂ ಫಿಕ್ಸ್ ಮಾಡಿರತಕ್ಕೆ ವ್ಯಾಲ್ಯೂಯೇಷನ್ ಬಾರದೆ ಇದ್ದರೆ ಅದನ್ನು ಕಂಡುಹಿಡಿ ಂ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಆ ರೀತಿ ಫಿಕ್ಸ್ ಮಾಡಿದರೆ ಸ್ಟಾಂಪ್ ಡ್ಯೂಟಿ ಕೊಟ್ಟಿ ರಿಜಿಸ್ಟ್ರೇಷನ್ ಮಾಡಿಕೊಂಡು ಹೋಗುತ್ತಾರೆ. ಸರ್ಟಿಫಿಕೇಟ್ ತರಬೇಕು ಎಂದು ಮಾಡಿದರೆ ಅದನ್ನು ಪೆರಿಫೈ ಮಾಡಬೇಕುಎಂದು ಡಿಲೇ ಮಾಡಿ ದುಡ್ಡು ಕೊಟ್ಟರೆ ಒಂದು ತರಹ, ದುಡ್ಡು ಕೊಡದೇ ಇದ್ದರೆ ಒಂದೂ ತರಹ ಮಾಡುತ್ತಾರೆ. ಆದ್ದರಿಂದ ಈ ಕಾನೂನಿನಲ್ಲಿ ಹೇಳಿರುವ ಹಾಗೆ ಮತ್ತೆ ಸಬ್‌ರಿಜಿಸ್ಟ್ರಾರ್ ಅವರಿಗೆ ಈ ಒಂದೂ ಸ್ಟಾಂಪ್ ವ್ಯಾಲ್ಯೂಯೇಷನ್ ಮಾಡತಕ್ಕ ಅವಕಾಶವನ್ನು ಕೊಟ್ಟರೆ ಲಂಚರುಷವತ್ತುಗಳಿಗೆ ಅವಕಾಶವಾಗುತ್ತದೆ ಲಂಚ ಕೊಟ್ಟರೆ ಸುಮ್ಮನೆ ಬಿಡುತ್ತಾರೆ, ಲಂಚ ಕೊಡದಿದ್ದರೆ ಅವರ ಮೇಲೆ ಕ್ರಮಗೆಗೆದುಕೊಂಡು ಡೆಪ್ಯುಟಿ ಕಮಿಷನರಿಗೆ ಬರೆಯುವುದು ಕಿರುಕುಳ ಕೊಡುವುದು ಎಲ್ಲಾ ಮಾಡುತ್ತಾರೆ. ಈ ದೃಷ್ಟಿಯಿಂದ ಮುನಿಸಿಪಾಲಿಟಿಗಳಲ್ಲಿ ಕಾರ್ಪೊರೇಷನ್‌ನಲ್ಲಿ ಇಂಜನಿಯರ್‌ಗಳು ಇರುತ್ತಾರಂ. ರೆವಿನ್ಯೂ ಇನ್‌ಸ್ಪೆಕ್ಟರುಗಳು ಇರುತ್ತಾರೆ. ಇವರೆಲ್ಲರನ್ನೂ ಸೇರಿಸಿ ಒಂದು ಕಮಿಟಿ ಮಾಡಿ ಯಾವ ಯಾವ ಏರಿಯಾದಲ್ಲಿ ಎಷ್ಟೆಷ್ಟು ಸ್ಟಾಂಪ್ ಡ್ಯೂಟಿ ಕೊಡಬೇಕೆಂಬುದನ್ನು ನಿಗಧಿ ಮಾಡಬೇಕು. ಆಗ ಒಂದು ನಿಗದಿಯಾದ ಸ್ಟಾಂಪ್ ಡ್ಯೂಟಿ ಇದ್ದರೆ ಆದರಂತೆ ಸ್ಟಾಂಪ್ ವ್ಯಾಲ್ಯೂಯೇಷನ್ ಕೊಟ್ಟು ರಿಜಿಸ್ಟ್ರೇಷನ್ ಮಾಡಿಕೊಂಡು ಹೋದರೆ ಸ್ಟಾಂಪ್ ಫೀಜ್ ಎಷ್ಟು ಸರ್ಕಾರಕ್ಕೆ ಅಷ್ಟು ಬರುತ್ತದೆ. ಆದು ಜನಗಳಿಗೂ ತೊಂದರೆಯಾಗುವುದಿಲ್ಲ ಆದ್ದರಿಂದ ಏರಿಯಾವೈಜ್ ಸ್ಟಾಂಪ್ ವಾಲ್ಯೂಯೇಷನ್ ಫಿಕ್ಸ್‌ಮಾಡುವುದು ಒಳ್ಳೆಯದು ಆದರಿಂದ ಅನುಕೂಲವಾಗುತ್ತ ೨ ಎಂದು ಹೇಳಿ ಮಾನ್ಯ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ಮಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ವಿ. ಕಕ್ಕಿಲಾಯ (ಬಂಟ್ವಾಳ).— ಸನ್ಮಾನ್ಯ ಉಪಾಧ್ಯಕ್ಷರೇ ಈ ಸಭೆಯಮುಂದ ಮಾನ್ಯ ಕಂದಾಯ ಮಂತ್ರಿಗಳು ಮಂಡಿಸಿರುವ ಕರ್ನಾಟಕ ಸ್ಟಾಂಪ್ ಅಮೆಂಡ್‌ಮೆಂಟ್ ಬಿಲ್ಲನ್ನು ನಾನು ಸ್ವಾಗತ ಮಾಡುತ್ತೇನೆ. ಶ್ರೀಮಾನ್ ಶಾಮಣ್ಣನವರು ಒಂದೆರಡು ವಿಚಾರಗಳನ್ನು ಬಿಪಳ ವಿವರವಾಗಿ ಹೇಳಿ

ದ್ದಾರೆ. ಒಂದನೆಯದಾಗಿ ನಗರ ಪ್ರದೇಶದಲ್ಲಿ ಮುಖ್ಯವಾಗಿ ಇಮ್ಮೂವಬಲ್ ಪ್ರಾಪರ್ಟಿ, ಸ್ಥಿರ ಆಸ್ತಿ ಏನಿದೆ ಇದರ ಬೆಲೆ ಜಾಸ್ತಿಯಾಗಿದೆ, ಇದರ ಮೇಲೆ ಸರ್ಕಾರದವರು ತೆರಿಗೆಯನ್ನು ಹಾಕಿ ಆ ಹಣದಿಂದ ಸರ್ಕಾರದವರು ಹಲವು ಯೋಜನೆಗಳನ್ನು ಮಾಡಿ ಜನಗಳಿಗೆ ಹೆಚ್ಚಿನ ಅನುಕೂಲತೆಗಳನ್ನು ಮಾಡಿಕೊಡುತ್ತಾರೆ ನೀರು ಸರಬರಾಜು ವಿದ್ಯುಚ್ಛಕ್ತಿ ಸರಬರಾಜು, ಮುಂತಾದ ಅನುಕೂಲಗಳು ಜಾಸ್ತಿಯಾಗುತ್ತಾ ಇರುವುದರಿಂದ ಆಸ್ತಿಯ ಬೆಲೆಯೂ ಕೂಡ ಜಾಸ್ತಿಯಾಗುತ್ತದೆ. ಕೈಗಾರಿಕೆಗಳು ಹೆಚ್ಚು ಬೆಳೆದ ಹಾಗೆ ಸ್ವಾಭಾವಿಕವಾಗಿ ಅಕ್ಕಪಕ್ಕದಲ್ಲಿರತಕ್ಕ ಜಮೀನಿನ ಬೆಲೆಯೂ ಕೂಡ ಜಾಸ್ತಿಯಾಗುತ್ತದೆ. ಮನೆಗಳ ಬೆಲೆಯೂ ಜಾಸ್ತಿಯಾಗುತ್ತದೆ. ಆದ್ದರಿಂದ ಸಾರ್ವಜನಿಕರ ಜಮೀನಿನ ಬೆಲೆ ಆಸ್ತಿ ಬೆಲೆ ಜಾಸ್ತಿಯಾಗುತ್ತದೆ. ಅದರ ಒಂದು ಭಾಗವನ್ನು ಅದರೂ ಅವರು ಆ ಆಸ್ತಿಯನ್ನು ಪರಭಾರೆ ಮಾಡುವಾಗ ರಿಜಿಸ್ಟ್ರೇಷನ್ ಮಾಡುವ ಸಂದರ್ಭದಲ್ಲಿ ಸರ್ಕಾರಕ್ಕೆ ಸ್ವಲ್ಪ ಹಣವನ್ನು ಕೊಡಬೇಕು. ಆ ಒಂದು ಉದ್ದೇಶದಿಂದ ಮಾನ್ಯ ಮಂತ್ರಿಗಳು ಈ ಒಂದು ಮಸೂದೆಯನ್ನು ಇಲ್ಲಿ ತಂದಿದ್ದಾರೆ. ಇದು ಬಹಳ ಸೂಕ್ತವಾದುದು ಇದನ್ನು ನಾನು ಸ್ವಾಗತ ಮಾಡುತ್ತೇನೆ.

ಎರಡನೆಯ ವಿಚಾರವೇನೆಂದರೆ ಡೆಪ್ಯುಟಿ ಕಮಿಷನರು ಯಾವುದೇ ಆಸ್ತಿ ರಿಜಿಸ್ಟ್ರೇಷನ್ ಆದಾಗ ಅದಕ್ಕೆ ಮೌಲ್ಯವನ್ನು ಕಡಿಮೆ ತೋರಿಸಿದ್ದರೆಂದು ಅದನ್ನು ಕಂಡು ಹಿಡಿದು ನ್ಯಾಯವಾಗಿ ಕೊಡಬೇಕಾದಂತಹ ಸ್ಟ್ಯಾಂಪ್ ಡ್ಯೂಟಿಯನ್ನು ವಸೂಲು ಮಾಡಬೇಕು ಎಂದು ಹೇಳಿದ್ದಾರೆ. ಈಗ ಡೆಪ್ಯುಟಿ ಕಮಿಷನರಿಗೆ ಹಲವಾರು ಜವಾಬ್ದಾರಿಗಳನ್ನು ಹೊರಿಸಿದ್ದಾರೆ. ಡೆವಲಪ್‌ಮೆಂಟ್ ಆಕ್ಟಿವಿಟೀಸ್ ಬಗ್ಗೆ ಶಿಸ್ತನ್ನು ಪರಿಪಾಲನೆ ಮಾಡುವುದು ಅವರಿಗೆ ವಹಿಸಿದ್ದಾರೆ. ಇದರಿಂದಾಗಿ ಮತ್ತೆ ಇಂಥಾ ವಿಚಾರಗಳಿಗೆ ಡೆಪ್ಯುಟಿ ಕಮಿಷನರು ಗಮನ ಕೊಡುವುದು ಕಷ್ಟವಾಗುತ್ತದೆ. ಆದ್ದರಿಂದ ಶ್ರೀಮಾನ್ ಶಾಮಣ್ಣನವರು ಹೇಳಿದ ಹಾಗೆ ಇದಕ್ಕೆ ಒಂದು ಪ್ರತ್ಯೇಕವಾದ ಸಿಬ್ಬಂದಿಯನ್ನು ನೇಮಕ ಮಾತಿ ಪ್ರಾಪರ್ಟಿ ರಿಜಿಸ್ಟ್ರೇಷನ್ ಆಗುವುದಕ್ಕೆ ಮುಂಚೆ ಅದರ ಮೌಲ್ಯವನ್ನು ನೋಡಿ ಅವರು ಇಷ್ಟು ಸ್ಟ್ಯಾಂಪ್‌ಡ್ಯೂಟಿಯನ್ನು ಕೊಡಬೇಕು ಎಂದು ಪಂಜಾರೂ ಮಾಡುವ ಹಾಗೆ ಒಂದು ವ್ಯವಸ್ಥೆಯನ್ನು ಮಾಡಿದರೆ ಒಳ್ಳೆಯದು. ಆ ರೀತಿ ಮಾಡುವುದಾದರೆ ಎರಡು ವರ್ಷಗಳ ನಂತರ ಅವರಿಗೆ ನೋಟೀಸ್ ಕೊಟ್ಟು ಎಷ್ಟು ಹೆಚ್ಚು ಫೀಜು ಬರುತ್ತದೆಯೋ ಅದನ್ನು ವಸೂಲು ಮಾಡುವ ಪ್ರಮೇಯ ಬರುವುದಿಲ್ಲ ಕಿರುಕುಳ ಕೊಡುವ ಪ್ರಮೇಯ ಬರುವುದಿಲ್ಲ. ರಿಜಿಸ್ಟ್ರೇಷನ್ ಮಾಡುವಾಗ ಇಷ್ಟೂ ಸ್ಟ್ಯಾಂಪ್ ಫಿಕ್ಸ್ ಮಾಡುತ್ತಾರೆಯೋ ಅಷ್ಟನ್ನು ಅವರು ಕೊಡಬೇಕಾಗುತ್ತದೆ. ಆದ್ದರಿಂದ ರಿಜಿಸ್ಟ್ರೇಷನ್ ಮಾಡುವುದಕ್ಕೆ ಮುಂಚೆಯೇ ಪ್ರತ್ಯೇಕ ಸಿಬ್ಬಂದಿಯವರು ಇಷ್ಟು ಸ್ಟ್ಯಾಂಪ್ ಡೂಟಿಯನ್ನು ಕೊಡಬೇಕು ಎಂದು ಗೊತ್ತು ಮಾಡುವುದು ಅನುಕೂಲವಾಗುತ್ತದೆ. ಈ ದೃಷ್ಟಿಯಿಂದ ಇಂಥಾ ಒಂದು ವ್ಯವಸ್ಥೆ ಮಾಡುವುದು ಉಚಿತ ಎಂದು ಅನಿಸುತ್ತದೆ. ಎರಡನೆಯದಾಗಿ ಬಹಮುಖ್ಯವಾದಂಥ ಪ್ರಶ್ನೆ ಈ ಮಸೂದೆಯನ್ನು ರೆಟ್ರಾಸ್ಪೆಕ್ಟಿವ್ ಎಫೆಕ್ಟ್‌ಗೆ ಕೊಡಬೇಕೇ ಎನ್ನುವುದು. ಮೂರು ವರ್ಷಗಳು ಅಥವಾ ಐದು ವರ್ಷಗಳ ಹಿಂದೆ ಇರತಕ್ಕ ವ್ಯವಹಾರಗಳಿಗೂ ಅದನ್ನು ಅನ್ವಯಿಸಬೇಕೆಂದು ಹೇಳಿದ್ದಾರೆ. ಅದಕ್ಕೂ ಕೂಡ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದೇವೆ. ಇದರ ಬಗ್ಗೆ ಕೆಲವು ಉದಾಹರಣೆಗಳನ್ನೂ ಸಹ ಕೊಟ್ಟಿದ್ದೇನೆ. ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆದಂಥ ಒಂದು ವ್ಯವಹಾರವನ್ನು ತಂದರೂ ಅವುಗಳ ವಿವರಗಳಿಗೆ ನಾನು ಈಗ ಹೋಗುವುದಿಲ್ಲ ಬಹಳ ಕಡಿಮೆ ಬೆಲೆಗೆ ಆಸ್ತಿಯನ್ನು ಒಬ್ಬರು ಬಿ.ಇ ಎಲ್. ನವರು ಹಾಸನ ಕೋ-ಆಪರೇಟಿವ್ ಸೊಸೈಟಿಗೆ ಮಾರಿರುವ ವಿಷಯವನ್ನು ತಮ್ಮ ಗಮನಕ್ಕೆ ತಂದಿದ್ದೇನೆ, ಅದನ್ನು ಪರಿಶೀಲನೆ ಮಾಡಬೇಕು ಇಂತಹ ನೂರಾರು ಉದಾಹರಣೆಗಳನ್ನು ನಾನು ಕೊಡಬಹುದು. ಇದು ಮಾತ್ರವಲ್ಲ. ಹಿಂದಿನಿಂದ ರಿಜಿಸ್ಟರ್ ಆಗಿರುವುದನ್ನು ಕೂಡ ಈ ಮಸೂದೆಯಲ್ಲಿ ತರಬೇಕು. ಹೆಚ್ಚಿಗೆ ಹಿಂದಕ್ಕೆ ಹೋಗುವುದಕ್ಕೆ ಆಗದೇ ಇದ್ದರೂ ಳಿ (ಎ)ರಲ್ಲಿ ಮಾರನೆಯ ಸಬ್ ಕ್ಲಾಜ್ ಪ್ರಾವಿಸೊ ಏನು ಸೇರಿಸಿದ್ದಾರೋ ಆ ಪ್ರಾವಿಜೋ ತೆಗೆದುಹಾಕಿದರೆ ಒಳ್ಳೆಯದು. ಎರಡು ವರ್ಷಗಳ ಹಿಂದೆ ಆಗಿರುವುದನ್ನು ನಿವೃತ್ತಿ ಹತೋಟಿಗೆ ತರಬಹುದು ಡೆಪ್ಯುಟಿ ಕಮಿಷನರ್ ಅವರು ಈಗಿರುವ ವ್ಯವಹಾರಗಳನ್ನು ವಿಚಾರಣೆಗೆ ತೆಗೆದುಕೊಂಡು ಏನಾದರೂ ಕಡಿಮೆ ಬೆಲೆಗೆ ರಿಜಿಸ್ಟರ್ ಆಗಿದ್ದರೆ ಅಂತಹವರಿಂದ ಸರಿಯಾದ ಸ್ಟ್ಯಾಂಪ್ ಡ್ಯೂಟಿಯನ್ನು ವಸೂಲು ಮಾಡಬೇಕು. ಕೇವಲ ಎರಡು ವರ್ಷಗಳ ಹಿಂದೆ ಆಗಿರತಕ್ಕ ರಿಜಿಸ್ಟ್ರೇಷನ್‌ನ್ನಾದರೂ ಇದರ ಒಂದು ವ್ಯಾಪ್ತಿಗೆ ತರಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಎರಡು ವರ್ಷಗಳವರೆಗೆ ಮಾತ್ರ ಪರಿಶೀಲಿಸಿ ಮಂಜೂರು ಮಾಡುವುದು ಸೂಕ್ತವಾಗಿದೆ ಅದಕ್ಕೆ ನನ್ನ ಸಂಪೂರ್ಣ ಬೆಂಬಲವನ್ನು ವ್ಯಕ್ತ ಪಡಿಸುತ್ತೇನೆ.

† ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಅಧ್ಯಕ್ಷರೇ, ಮಾನ್ಯ ಕಂದಾಯ ಸಚಿವರು ತಂದಿರತಕ್ಕ ಈ ಮಸೂದೆ ಬಹಳ ಉತ್ತಮವಾದಂಥಾದ್ದು. ಅದಕ್ಕೆ ನಾನು ಬೆಂಬಲವನ್ನು ಸೂಚಿಸುತ್ತೇನೆ. ಆದರೆ ಈ ಮಸೂದೆಯನ್ನು ತರತಕ್ಕ ಕಾಲದಲ್ಲಿ ಮತ್ತು ಹಣಕಾಸಿನ ಸಚಿವರು ತಮ್ಮವ್ಯಯವನ್ನು ಈ ಸದನದಲ್ಲಿ ಮಂಡಿಸುವ ಕಾಲದಲ್ಲಿ ಕೆಲವೊಂದು ಪ್ರಕರಣಗಳನ್ನು ನಾವು ವಿಮೆಗಳಿಗೆ ಒಳಪಡಿಸಿಬಾಗ ಇದರಿಂದ ನಮಗೆ

ಕಂಡುಬಂದದ್ದು ಏನೆಂದರೆ ಸ್ವಾಭಾವಿಕವಾಗಿ ಈ ಸಂದರ್ಭದಲ್ಲಿ ಯಾವ ಒಂದು ದರವನ್ನು ಕ್ರಯಪತ್ರ ದಲ್ಲಿ ಗೊತ್ತುಮಾಡಬೇಕಾಗಿತ್ತೋ ಅದನ್ನು ಮಾಡದೆ ಕಡಿಮೆ ಕ್ರಯದಲ್ಲಿ ಮಾಡಿ ಸರ್ಕಾರಕ್ಕೆ ಮೋಸ ಮಾಡಿದ್ದಾರೆಂದು ಹೇಳಿದ್ದೀರಿ. ಅವನ್ನು ಇನ್ನೂ ಪತ್ತೆ ಹಚ್ಚಬೇಕು, ಆ ಪ್ರಕರಣಗಳನ್ನು ತಿದ್ದುಪಡಿ ಮಾಡಿಸಿ ಹಣವನ್ನು ತರುವ ಪ್ರಯತ್ನಮಾಡಬೇಕಾಗಿತ್ತು ಎಂಬುದಾಗಿ ಆಗಲೇ ಕಂದಾಯ ಸಚಿವರು ಪ್ರಸ್ತಾಪಿಸಿದಾಗ ನಾನು ಕೇಳಿದ್ದೆ ಯಾವನು ಕದ್ದಿದ್ದಾನೋ ಅವನನ್ನು ಹಿಡುವುದು, ಮತ್ತು ಮುಂದೆ ಕದಿಯಬಾರದು ಎಂಬ ಬಗ್ಗೆ ಶಾಸನವನ್ನು ತಿದ್ದುಪಡಿಮಾಡುವುದು ಸರಿಯಲ್ಲ ವಿಕಿಂದರೆ ಬೆಂಗಳೂರು ನಗರದಲ್ಲಿ ಇನ್ನೂ ಇತರ ದೊಡ್ಡದೊಡ್ಡ ನಗರ ಪ್ರದೇಶಗಳಲ್ಲಿ ಇವತ್ತು ಅಸಂಖ್ಯಾತ ಪ್ರಮಾಣದಲ್ಲಿ ಇಂತಹ ಅವ್ಯವಹಾರ ಗಳು ನಡೆದಿವೆ ಖರೀದಿ ಪತ್ರಗಳು ಕಡಿಮೆ ಬೆಲೆಯಲ್ಲಿ ರಿಜಿಸ್ಟರ್ ಆಗಿವೆ. ಅನೇಕ ಕಡೆ ಇದರಿಂದ ಎಷ್ಟೋ ಅಭಿವೃದ್ಧಿ ಕೆಲಸಕಾರ್ಯಗಳು ನಡೆದಿವೆ, ಅಂತಹ ಜಾಗಗಳನ್ನು ಕಂಡುಹಿಡಿದು ಕೇಸುಗಳನ್ನು ಪತ್ತೆ ಹಚ್ಚಬೇಕಾದರೆ ಪೋಲೀಸಿನವರು ಅಗತ್ಯವಾಗಿದೆ. ಜನರು ಸ್ವಾಭಾವಿಕವಾಗಿ ಸಬ್ ರಿಜಿಸ್ಟ್ರಾರ್ ಅವರಿಗೆ ಕಾನೂನು ಪ್ರಕಾರ ಕೊಡುವ ಫೀ ಬಗ್ಗೆ ತನಿಖೆ ಮಾಡುವುದಕ್ಕೆ ಅವಕಾಶವಿಲ್ಲ. ಇವತ್ತು ಅಲ್ಲಿ ಕಡಿಮೆ ಪ್ರಮಾಣದಲ್ಲಿ ಅಂಡರ್ ವ್ಯಾಲ್ಯುಯೇಷನ್ ಮಾಡಿ ಖರೀದಿ ಪತ್ರಗಳು ನಡೆದಿವೆ. ಬೆಂಗಳೂರು ಅಂತಹ ಒಂದು ಪ್ರದೇಶದಲ್ಲಿ ಇಂಥಾದ್ದು ೨೦ ಸಾವಿರ ಸೇಲ್‌ಡೀಡ್ಸ್ ನಡೆದಿವೆಯೆಂಬುದಾಗಿ ನಾನು ಹೇಳುತ್ತೇನೆ, ಬೆಂಗಳೂರು ನಗರ ಒಂದರಲ್ಲಿ ಈ ರೀತಿಯಾಗಿ ನಡೆದಿದ್ದರೆ ಇನ್ನು ಮೈಸೂರು, ಶಿವಮೊಗ್ಗಾ ಬೆಳಗಾಂ, ಧಾರವಾಡ, ಮುಂತಾದ ಅನೇಕ ಪ್ರದೇಶಗಳಲ್ಲಿ ಉದಾಹರಣೆಗಳನ್ನು ತೆಗೆದುಕೊಂಡರೆ ಇನ್ನೆಷ್ಟು ಪ್ರಮಾಣದಲ್ಲಿ ಇದಂ ನಡೆದಿದೆ ಎಂಬುದಾಗಿ ಊಹಿಸಬಹುದು ಹೀಗೆ ಕರ್ನಾಟಕ ರಾಜ್ಯದಲ್ಲಿ ವರ್ಷೇ ವರ್ಷೇ ಎಷ್ಟೋ ಖರೀದಿ ಪತ್ರಗಳು ನಡೆಯುತ್ತಿವೆ. ಇದರಿಂದ ಕೇವಲ ಸರ್ಕಾರಕ್ಕೆ ಲಕ್ಷಾಂತರ ರೂಪಾಯಿಗಳು ಮೋಸವಾಗಿಲ್ಲ ಕೋಟ್ಯಾಂತರ ರೂಪಾಯಿಗಳು ಮೋಸವಾಗಿದೆ. ಇಂತಹ ಪ್ರಕರಣ ಗಳನ್ನು ಶಾಸನಗಳ ವ್ಯಾಪ್ತಿಗೆ ತರಬೇಕಾದರೆ ಈ ತಾರೀಖಿನಿಂದ ಎರಡು ವರ್ಷಗಳ ಹಿಂದೆ ನಡೆದಂಥ ಎಲ್ಲ ವ್ಯವಹಾರಗಳನ್ನೂ ಇವತ್ತು ತರುವುದಕ್ಕೆ ಪ್ರಯತ್ನಮಾಡಬೇಕಾಗಿತ್ತು. ತಾವು ಒಂದು ಸಿದ್ಧಾಂತ ಹೇಳು ತೀರಿ, ಪ್ರಾಸ್ಪೆಕ್ಟಿವ್ ಇರಬೇಕು, ರಿಟ್ರಾಸ್ಪೆಕ್ಟಿವ್ ಇರಬಾರದು. ಎಂದು ಈ ಸಿದ್ಧಾಂತ ಯಾರು ಮಾಡು ವುದು ? ಶಾಸನಸಭೆ ಇರುವುದು ಶಾಸನಗಳನ್ನು ಮಾಡುವುದಕ್ಕೆ ಇದು ಬ್ರಹ್ಮನಿಂದ ಸೃಷ್ಟಿಮಾಡುವಂಥಾ ದ್ದಲ್ಲ ಎಲ್ಲವೂ ಮನುಷ್ಯ ಸೃಷ್ಟಿ ಶಾಸನಸಭೆಗಳ ಸೃಷ್ಟಿ, ಶಾಸನ ಮಾಡುವವರು ನಾವೇ. ಆದ್ದರಿಂದ ರಾಜ್ಯಾಂಗದಲ್ಲಿ ಯಾವುದೇ ಕಾನೂನನ್ನು ರಿಟ್ರಾಸ್ಪೆಕ್ಟಿವ್ ಎಫೆಕ್ಟಿಗೆ ಕೊಡಬಾರದೆಂದು ಪ್ರೊಹಿಬಿಷನ್ ಇದ್ದರೆ ಆಗ ಅವರು ಹೇಳಿದ್ದು ಸ್ವಾಭಾವಿಕ ಆದರೆ ಈಗ ಶಾಸನ ಮಾಡುವ ಕಾಲದಲ್ಲಿ ಇದಕ್ಕೆ ತಕ್ಕ ಅವಕಾಶ ಮಾಡಿ ಹಿಂದಿನ ವ್ಯವಹಾರಕ್ಕೆ ಅನ್ವಯಿಸಬೇಕು ಇವತ್ತು ಶಾಸನವನ್ನು ಮಾಡಕ್ಕೆ ಅಧಿಕಾರವಿರುವಾಗ ಅನೇಕ ವ್ಯವಹಾರಗಳಲ್ಲಿ ಅಂಡರ್‌ವ್ಯಾಲ್ಯುಯೇಷನ್ ಆಗಿದ್ದು ಅಂತಹ ವ್ಯವಹಾರವನ್ನು ಖಚಿತವಾಗಿ ಶಾಸನದವ್ಯಾಪ್ತಿಗೆ ತರುವುದಕ್ಕೆ ಪ್ರಯತ್ನಪಡಬೇಕು. ಈಗ ಕಂದಾಯ ಸಚಿವರು ಇಂತಹ ವಾದಸರಣಿ ನಡೆಸಿ ಎಲ್ಲಾ ವ್ಯವಹಾರಗಳನ್ನು ಈ ಶಾಸನದ ವ್ಯಾಪ್ತಿಗೆ ತರುವುದಕ್ಕೆ ಇನ್ನೂ ಪ್ರಯತ್ನಪಟ್ಟಿಲ್ಲ ಇದು ಸಾಧುವಾದುದಲ್ಲ. ನಾವು ಇವತ್ತು ಆಕ್ರಮ ವ್ಯವಹಾರ ಮಾಡುವ ಜನರನ್ನು ಕಂಡು ಕಂಡೂ ಕೈಬಿಟ್ಟರೆ ಮುಂದೆಯೂ ಕೂಡ ಇದೇ ರೀತಿಯಲ್ಲ ನಡೆಯುತ್ತದೆ ಜೊತೆಗೆ ಕಾನೂನು ಮಾಡಿದಮೇಲೆ ಮುಂದೆ ಬರುವವರು ಹುಷಾರಾಗುತ್ತಾರೆ. ಹಿಂದೆ ಕಳ್ಳತನದಿಂದ ಸರ್ಕಾರಕ್ಕೆ ಮಾಡಿರುವವರನ್ನು ಈಗ ಶಿಕ್ಷೆಗೆ ಗುರಿಪಡಿಸಿದರೆ ಮುಂದೆ ಮೋಸ ಮಾಡತಕ್ಕವರು ನಿಜವಾಗಿಯೂ ಹೆದರುತ್ತಾರೆ. ದಯಮಾಡಿ ಇದಕ್ಕೆ ಇನ್ನು ಸ್ವಲ್ಪ ಬಿಗಿಯಾದ ತಿದ್ದುಪಡಿಯನ್ನು ತರುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಹಿಂದೆ ಎರಡು ವರ್ಷಗಳಲ್ಲಿ ನಡೆದಿರತಕ್ಕಂಥ ಅಕ್ರಮಗಳಲ್ಲಿ ಅಂಡರ್ ವಾಲ್ಯೂಯೇಷನ್ ನಡೆದಿದೆ ಅದರ ಬಗ್ಗೆ ಈ ತಿದ್ದುಪಡಿಯ ಮುಖೇನ ವಿಚಾರಮಾಡಿ, ವಿಮರ್ಶೆಮಾಡಿ ಸರ್ಕಾರಕ್ಕೆ ಸಲ್ಲತೀಕಾದ ತೆರಿಗೆಯನ್ನು ಯಾರು ವಂಚಿಸಿದ್ದಾರೆ ಅಂಥಹ ಪ್ರಕರಣಗಳನ್ನು ಕಂಡು ಹಿಡಿದು ಸರ್ಕಾರದ ಬೊಕ್ಕಸಕ್ಕೆ ಹಣ ಬರುವಂತೆ ಈ ತಿದ್ದುಪಡಿಯಲ್ಲಿ ಅವಕಾಶ ಕಲ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೇ, ನಮ್ಮ ಶಾಸನ ಸಭೆಯಲ್ಲಿ ಮಾನ್ಯ ಬಂಗಾರಪ್ಪನವರು ಒಂದು ಕೇಸನ್ನು ತಂದಿದ್ದರು ಅದರಲ್ಲಿ ಮಾನ್ಯ ಶ್ರೀ ಕೆ. ಎಚ್. ಪಾಟೀಲ್‌ರ ಮಗ ಮತ್ತು ಈ ಮನೆಯ ಸದಸ್ಯರೊಬ್ಬರು, ರಾಣಿಬೆನ್ನೂರು ತಾಲ್ಲೂಕಿನ ಹಲಗೇರಿ ಎಂಬ ಗ್ರಾಮದಲ್ಲಿ ಒಂದು ಆಸ್ತಿಯನ್ನು ಕೇವಲ ೯೦ ಸಾವಿರ ರೂಪಾಯಿಗಳಿಗೆ ರಿಜಿಸ್ಟರ್ ಮಾಡಿಸಿಕೊಂಡಿದ್ದಾರೆಂದು ಅದು ನಿಜವಾಗಿಯೂ ಸುಮಾರು ೪-೫ ಲಕ್ಷ ರೂಪಾಯಿ ಬೆಲೆ ಬಾಳತಕ್ಕದ್ದು ಎಂದು ತಿಳಿದುಬಂದಿದೆ. ಇದನ್ನು ಸಭೆಯು ಗಮನಕ್ಕೆ ತಂದಾಗ ಕೆಲವರು ಆಕ್ಷೇಪಣೆ ಎತ್ತಿದರು ಆದರೆ ಈಗ ಆ ವಿಷಯವನ್ನು ವಿಚಾರ ಮಾಡುವುದಕ್ಕೆ ಸನ್ನಿವೇಶವನ್ನು ತಂದುಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ೬-೭ ತಿಂಗಳ ಹಿಂದೆ ನಡೆದ ಈ ಪ್ರಕರಣದಲ್ಲಿ ಮಾನ್ಯ ಕೆ. ಎಚ್. ಪಾಟೀಲರ ಮಗನು ಮತ್ತು ಈ ಮನೆಯ ಸದಸ್ಯರೊಬ್ಬರು ಖರೀದಿ ಮಾಡಿದ್ದಾರೆ.

MR. DEPUTY SPEAKER.—These matters have been raised and challenges were thrown on the floor of the House. Why the earlier opportunity was not utilised by the Hon. Member? All sorts of serious allagations were made. The Hon. Member who was present had felt that a notice should have been given and the allegations made should have been authenticated. But it was not done. This could have been done at an appropriate time giving a notice to other side How could this be replied without a notice? It will not be possible for the Minister to reply just now.

SRI KAGODU THIMMAPPA.—My purpose of asking is quite different.

MR. DEPUTY SPEAKER.—That may be defferent. But no purpose would be served by such things.

ಶ್ರೀ ಕಾಗೋಡು ತಿಮ್ಮಪ್ಪ.—ಏತಕ್ಕೆಂದರೆ ಈಗ ಅಂಥ ಪ್ರಕರಣಗಳನ್ನು ಪತ್ತೆ ಹಚ್ಚಿ ನೋಡಬೇಕೆಂದರೆ ಯಾರು ಬೇಕಾದರೂ ನೋಡಬಹುದು ನಾನು ಕೇಳುವುದು ಇಂಥ ಪ್ರಕರಣಗಳನ್ನು ಕಂಡುಹಿಡಿದು ಅದರಿಂದ ಸರ್ಕಾರಕ್ಕೆ ಬರಬೇಕಾದ ಹಣವನ್ನು ವಸೂಲು ಮಾಡುವುದಕ್ಕೆ ತಿದ್ದುಪಡಿತರುವು ಶಾಸನ ಮಾಡಬೇಕು. ನನಗೆ ತಿಳಿದು ಬಂದಿರುವ ಪ್ರಕಾರ ಕೆಲವು ನಗರಗಳಲ್ಲಿ, ಗ್ರಾಮಾಂತರ ಪ್ರದೇಶಗಳಲ್ಲಿ ಇಂಥ ಪ್ರಕರಣಗಳು ನಡೆದಿವೆ ಅಂಥವುಗಳನ್ನು ಈ ಶಾಸನದ ಮುಖೇನ ಹೇಗೆ ವಿಚಾರಣೆಗೆ ಒಳಪಡಿಸುತ್ತೀರಿ? ಇದಕ್ಕೆ ಯಾವ ಪರಿಹಾರವನ್ನು ಸೂಚಿಸುತ್ತೀರಿ ಎಂದು ತಾವು ತಿಳಿಸಬೇಕು. ಆದ್ದರಿಂದ ಶ್ರೀಮಾನ್ ಬಂಗಾರಪ್ಪನವರು ಹಿಂದೆ ಈ ಸದನದಲ್ಲಿ ಪ್ರಸ್ತಾಪಿಸಿದ ವಿಷಯವನ್ನು ನಾನು ಪ್ರಸ್ತಾಪ ಮಾಡಬೇಕಾದ ಪ್ರಸಂಗ ಬಂತು ಉದಾಹರಣೆಗೆ ಇಂಥಹ ಪ್ರಕರಣಗಳು ಬಂದರೂ ತನಿಖೆ ಮಾಡುವುದಕ್ಕೆ ಸಾಧ್ಯವೇ ಎನ್ನುವುದನ್ನು ಮಾನ್ಯ ಕಂದಾಯ ಸಚಿವರು ವಿವರವಾಗಿ ತಿಳಿಸಬೇಕು. ತಾವು ಏನು ಒಂದು ಶಾಸನವನ್ನು ತಂದಿದ್ದೀರಿ ಅದನ್ನು ಒಪ್ಪುವುದಕ್ಕೆ ಸಿದ್ದರಿದ್ದೇವೆ. ಇಂಥ ಪ್ರಕರಣಗಳು ಸಾಕಷ್ಟು ಪ್ರಮಾಣದಲ್ಲಿ ನಡೆಯುತ್ತಿವೆ. ಕೇವಲ ಬೆಂಗಳೂರು ಒಂದು ನಗರದಲ್ಲಿ ಸುಮಾರು ೫೦ ಸಾವಿರ ಪ್ರಕರಣಗಳು ನಡೆದಿರಬೇಕಾದರೆ ಇತೀ ಕರ್ನಾಟಕದಲ್ಲಿ ೨೦ರ ಪ್ರಕರಣಗಳು ನಡೆದಿರಬಹುದೆಂದು ಹೇಳಬಹುದು. ಆದ್ದರಿಂದ ಎಲ್ಲವನ್ನೂ ತನಿಖೆಗೆ ಒಳಪಡಿಸಿದರೆ ಕನಿಷ್ಟ ಪಕ್ಷ ೧೦ ಲಕ್ಷ ರೂಪಾಯಿಯಾದರೂ ಸರ್ಕಾರಕ್ಕೆ ಬರುತ್ತದೆಂದು ಹೇಳಬೇಕಾಗಿದೆ. ನಪ್ಪ ಈವತ್ತಿನ ಆಡಳಿತದಲ್ಲಿ ಯಾರು ಯಾರಂ ಒಳ್ಳೆಯವರು ಯಾರು ಯಾರು ಕೆಟ್ಟವರು ಎಂದು ಹೇಳುವುದಕ್ಕೆ ಆಗುವುದಿಲ್ಲ. ಆದ್ದರಿಂದ ಕಂದಾಯ ಮಂತ್ರಿಗಳು ಸ್ವಯಂಪ್ರೇರಿತರಾಗಿ ಅನೇಕ ಸಬ್ ರಿಜಿಸ್ಟ್ರಾರ್ ಆಫೀಸ್‌ಗಳಿಗೆ ಹೋಗಿ ಕೆಲವು ಅಕ್ರಮ ಪ್ರಕರಣಗಳನ್ನು ಕಂಡು ಹಿಡಿದಿದ್ದಾರೆ. ಅವರಿಗೆ ಅಲ್ಲಿ ನಡೆಯುವ ಅವ್ಯವಹಾರಗಳು ಮನವರಿಕೆಯಾಗಿವೆ. ಒಂದು ಪತ್ರವನ್ನು ರಿಜಿಸ್ಟರ್ ಮಾಡುವುದಕ್ಕೆ ಒಂದು ಪರ್ಸೆಂಟ್ ಆಥವಾ ಎರಡು ಪರ್ಸೆಂಟ್ ಎಂದು ನಿಗಧಿಯಾಗಿದೆ. ಎಂದು ಗೊತ್ತಾಗಿದೆ ಇದು ಎಲ್ಲಾ ಆಫೀಸುಗಳಲ್ಲಿಯೂ ಇದೆ. ಆದರೆ ಈ ರೀತಿ ಸೇಕಡವಾರು ಪರ್ಸಂಟೇಜ್ ಪಿ.ಡಬ್ಲ್ಯೂ.ಡಿ.ಯಲ್ಲಿ ನಿಗದಿಯಿಲ್ಲ. ಪಿ.ಡಬ್ಲ್ಯೂ.ಡಿಯಲ್ಲಿ ಗುತ್ತಿಗೆ ಇರುತ್ತದೆ.

MR. DEPUTY SPEAKER.—Why not the hon. Member get them hauled up by Anti-corruption Department?

ಶ್ರೀ ಎಚ್. ಡಿ ದೇವೇಗೌಡ.—ಆಂಟಿ ಕರಪಕ್ಷನ್ ಡಿಪಾರ್ಟ್‌ಮೆಂಟ್‌ನ್ನು ಸೂಪರ್‌ವೈಸ್ ಮಾಡುವುದಕ್ಕೆ ಇನ್ನೊಂದು ಆಂಟಿ ಕರೆಪಕ್ಷನ್ ಡಿಪಾರ್ಟ್‌ಮೆಂಟ್ ಮಾತಬೇಕಾಗುತದೆ. ತಾವು ಪಬ್ಲಿಕ್ ಅಕೌಂಟ್ಸ್ ಕಮಿಟಿಯಲ್ಲಿ ನೋಡಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಭ್ರಷ್ಟಾಚಾರ ಎಲ್ಲಿಯವರೆಗೆ ಹೋಗಿದೆ ಎಂದರೆ, ಇದು ದೇಹದ ಎಲ್ಲಾ ಭಾಗವನ್ನು ಆವರಿಸಿಕೊಂಡು ಇದೆ. ಕಾನೂನು ತಿದ್ದುಪಡಿ ಮಾತಿದರೆ ಪಾತ್ರ ಅನ್ಯಾಯ, ಅನಾಚಾರ ಭ್ರಷ್ಟಾಚಾರ ಹೋಗುವುದಿಲ್ಲ. ಆದ್ದರಿಂದ ಕಾನೂನು ಮಾಡುವುದರಿಂದ ಒಂದು ಸಮಾಧಾನ ಏನು ಎಂದರೆ ಕಾನೂನು ಮಾಡಿದ್ದೇವೆಂದು ಅಷ್ಟೆ. ಬೇರೆ ಇನ್ನು ಯಾವ ದೃಷ್ಟಿ

ಯಿಂದಲೂ ಸಮಾಧಾನವಾಗುವುದಿಲ್ಲ. ಇದರಿಂದ ಪ್ರಾಮಾಣಿಕತೆ ಬರುವುದಿಲ್ಲ. ಇದನ್ನು ಕಾರ್ಯಗತವಾಗಿದೆಯೆಂದು ನೋಡಬೇಕಾದರೆ ಸೈತಕ್ಕೋಪ್ ಹಾಕಿ ನೋಡಿದರೂ ಸಿಕ್ಕುವುದಿಲ್ಲ. ಒಬ್ಬ ಸಾಮಾನ್ಯ ಮನುಷ್ಯ ಒಂದು ಪ್ರಾಪರ್ಟಿಯನ್ನೂ ಅಂಡರ್‌ವ್ಯಾಲ್ಯೂ ಮಾಡಿ ರಿಜಿಸ್ಟರ್ ಮಾಡಿದ್ದಾರೆಂದು ನಾನು ಒಂದು ಆರ್ಜಿ ಕೊಡುತ್ತೇನೆ ಅದಕ್ಕೆ ತಾವು ಏನು ಮಾಡುತ್ತೀರಿ ? ಅವನಿಗೆ ಏನು ಶಿಕ್ಷೆ ವಿಧಿಸಬೇಕಾಗುತ್ತದೆ ಎಂದು ಮಾಡಿದರೆ ಅವನಿಗೆ ಕನಿಷ್ಟ ಪಕ್ಷ ಈ ರೀತಿ ಮಾಡಿದರೆ, ನನಗೆ ಇಂಥಹ ಶಿಕ್ಷೆಗೆ ಗುರಿಮಾಡುತ್ತಾರೆಂದು ಗೊತ್ತಾಗುತ್ತದೆ. ಆದ್ದರಿಂದ ಇದರ ಬಗ್ಗೆ ಮಾನ್ಯ ಕಂದಾಯ ಸಚಿವರು ವಿವರವಾಗಿ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಅದಕ್ಕೆ ಸರಿಯಾದಂಥ ತಿದ್ದುಪಡಿಯನ್ನು ಇದೇ ಅಧಿವೇಶನದಲ್ಲಿ ತಂದರೆ ಬಹುಶಃ ನನಗೆ ಬಹಳ ಸಂತೋಷವಾಗುತ್ತದೆ. ಇದನ್ನು ತಾವು ಮಾಡಲಿಲ್ಲ ಎನ್ನುವುದನ್ನು ನಾನು ಬಹಳ ವಿಷಾದದಿಂದ ಹೇಳಬೇಕಾಗುತ್ತದೆ. ಸರಿಯಾದಂಥ ತಿದ್ದುಪಡಿಯನ್ನು ಈಗಲಾದರೂ ತರುವುದಕ್ಕೆ ಸಾಧ್ಯವಿದೆ, ತರಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

4-30 P.M.

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರೇ, ನಮ್ಮ ಸದಸ್ಯರುಗಳು ಈ ಮಸೂದಾ ಕಾನೂನಿನ ಮೇಲೆ ಬಹಳ ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ ಅವುಗಳ ಜೊತೆಗೆ ಮಾನ್ಯ ಸದಸ್ಯರ ಆಕ್ಷೇಪಣೆಯೂ ತೀವ್ರವಾಗಿದೆ. ಈ ಮಸೂದೆಯನ್ನು ರಿಟ್ರಾಸ್ಪೆಕ್ಟೀವ್ ಎಫೆಕ್ಟ್‌ಗೆ ಏಕೆ ತರಲಿಲ್ಲ ಎನ್ನುವ ಅಭಿಪ್ರಾಯವನ್ನು ನಾಲ್ಕು ಜನ ಮಾನ್ಯ ಸದಸ್ಯರು ವ್ಯಕ್ತಪಡಿಸಿದ್ದಾರೆ. ಇದಕ್ಕೆ ಕಾರಣ ಏನು ಎಂದರೆ, ಇಲ್ಲಿಯ ವರೆಗೆ ಇರತಕ್ಕ ಕಾನೂನಿನಲ್ಲಿ ಮಾರ್ಕೆಟ್ ವ್ಯಾಲ್ಯು ಎನ್ನುವ ಪದವಿಲ್ಲ. ಅದಕ್ಕೆ ಬದಲಾಗಿ ಕನ್‌ಸಿಡರೇಷನ್ ಎನ್ನುವ ಪದವನ್ನು ಉಪಯೋಗಿಸಿದ್ದಾರೆ. ಆದ್ದರಿಂದ ಇದು ಬಹಳ ವೇಗ ಆಗಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಕಾಂಟ್ರಾಕ್ಟ್ ಆಕ್ಟ್‌ನಲ್ಲಿ ಲಾಫುಲ್ ಕನ್‌ಸಿಡರೇಷನ್ ಎಂದು ಇದೆ ಇದು ಥಿಂಗ್ ಡೀಡ್, ಮತ್ತು ಕಂಟ್ರಾಕ್ಟ್‌ಯಲ್ ಆಬ್ಲಿಗೇಷನ್. ಇದರ ಪ್ರಕಾರ lawful consideration equally means value of the property.

ಶ್ರೀ ಎನ್ ಹುಚ್ಚಮಾಸ್ತಿಗೌಡ.—ವಾಲ್ಯು ಆಫ್ ಪಾರ್ಟಿಯನ್ನು ನೀವು ಇಂಟರ್ ಪ್ರಿಟ್ ಮಾಡಿದರೂ ಕೂಡ ಈಗ ಇರತಕ್ಕ ಕಾನೂನಿನಲ್ಲಿ ಸೇಲ್ಸ್, ಕನ್‌ಸಿಡರೇಷನ್ ಎನ್ನುವ ಪದ ಇದೆ. ಮಾರ್ಕೆಟ್ ವ್ಯಾಲ್ಯು ಎನ್ನುವ ಪದ ಅಲ್ಲಿ ಇಲ್ಲದಿರುವಾಗ ಇದು ಬಹಳ ದೊಡ್ಡ ದೋಷ. ಹೀಗಿರುವಾಗ ನಾವು ಇದನ್ನ ರಿಟ್ರಾಸ್‌ಪೆಕ್ಟೀವ್ ಎಫೆಕ್ಟ್‌ಗೆ ಕೊಟ್ಟರೆ ಹಿಂದೆ ಯಾವುದು ತಪ್ಪು ಇಲ್ಲವೋ ಅವಕ್ಕೆ ನಾವು ತಪ್ಪು ಎಂದು ಮಾಡಿದಂತಾಗುತ್ತದೆ. ಆದ್ದರಿಂದ ಆ ರೀತಿ ಮಾಡುವುದಕ್ಕಾಗುವುದಿಲ್ಲ. ಹಿಂದೆ ಯಾವ ರೀತಿಯ ಕಾನೂನು ಇದರ ಬಗ್ಗೆ ಇಲ್ಲದಿರುವಾಗ ನಾವು ಇದನ್ನು ರಿಟ್ರಾಸ್‌ಪೆಕ್ಟೀವ್ ಎಫೆಕ್ಟ್‌ಗೆ ಕೊಟ್ಟರೆ ಅನೇಕ ಸಂದರ್ಭಗಳಲ್ಲಿ ಅನೇಕ ಟ್ರಾನ್ಸ್‌ಯಾಕ್ಷನ್‌ಗಳಲ್ಲಿ ಕಾರ್ಯತಃ ಬಹಳ ಗೊಂದಲಗಳಾಗುತ್ತವೆ. ಇದನ್ನೂ ಕೂಡ ನಾವು ಗಮನಿಸಬೇಕು. ಆದ್ದರಿಂದ ನಾವು ಇದನ್ನು ೧-೫-೧೯೬೧ರಿಂದ ಚಾರಿಗೆ ತರುತ್ತಿದ್ದೇವೆ. ಮಾರ್ಕೆಟ್ ವ್ಯಾಲ್ಯುಅನ್ನು ಹಾಕುವ ದೆಸೆಯಿಂದ ಈ ತಿದ್ದುಪಡಿಯನ್ನು ತಂದಿದ್ದೇವೆ ನನಗೆ ತಿಳಿದ ಪ್ರಕಾರ ರಿಟ್ರಾಸ್ಪೆಕ್ಟೀವ್ ಮಾಡುವುದಕ್ಕೆ ರಾಜ್ಯಾಂಗದ ವಿರೋಧವೂ ಕೂಡ ಇದೆ. ಆರ್ಟಿಕಲ್ ೨೦(೧) ನಲ್ಲಿ ಹೀಗೆ ಹೇಳಿದೆ —

> "No person shall be convicted of any offence except for violation of a law in force at the time of the commission of the act charged as an offence nor be subjected to a penalty greated than that which might have been inflicted under the law in force at the time of the commission of the offence".

ಈಗ ಹಿಂದೆ ಪ್ರೊವಿಜನ್ ಇದ್ದು ಹಾಕದೆ ತಪ್ಪಾಗಿದ್ದರೆ ಆಗ ನಾವು ಅವರಿಗೆ ಶಿಕ್ಷೆ ಮಾಡುವುದು. ಈಗ ಅಂಥ ಪರಿಸ್ಥಿತಿ ಇಲ್ಲದಿರುವಾಗ ರಿಟ್ರಾಸ್‌ಪೆಕ್ಟೀವ್ ಆಗಿ ಇದನ್ನು ನಾವು ಮಾಡಲು ಬರುವುದಿಲ್ಲ. ಕಾನೂನನ್ನು ಜಾರಿಗೆ ತರುವಾಗ ಯಾವುದು ಶಿಕ್ಷಾರ್ಹವಲ್ಲವೋ ಅದನ್ನು ಶಿಕ್ಷಾರ್ಹ ಮಾಡಿದಂತಾಗ ಬಾರದು. ಇದು ಒಂದು ದೃಷ್ಟಿ. ಇದರ ಜೊತೆಗೆ ಇನ್ನೊಂದು ಕಾರಣವೇನೆಂದರೆ, ನಾವು ಪ್ಲೆಟ್ ಸ್ಕೀಂನ್ನು ತೆಗೆದುಕೊಂಡು ಪ್ಲೆಟ್ ಸರ್ವೇ ಮಾಡಿ ಪೂರ್ಣ ವಿವರಗಳನ್ನು ತಿಳಿದು ಅಂಕಿಅಂಶಗಳನ್ನು

ಸಂಗ್ರಹಿಸಿದ ಮೇಲೆ ಈ ಒಂದು ತಿದ್ದುಪಡಿಯನ್ನು ತರುವುದಕ್ಕೆ ಸಾಧ್ಯವಾಯಿತು. ಈ ಒಂದು ತಿದ್ದುಪಡಿಯಿಂದ ಮಾರ್ಕೆಟ್ ವ್ಯಾಲ್ಯುಗಿಂತ ಕಡಿಮೆ ಬೆಲೆಗೆ ಆಸ್ತಿಯ ಕ್ರಯವಾಗಿದ್ದಲ್ಲಿ ಇವರು ಉದ್ದೇಶಪೂರ್ವಕವಾಗಿಯೇ ಇದಕ್ಕೆ ಅವಕಾಶ ಕೊಟ್ಟಿದ್ದಾರೆ ಎಂದು ತಿಳಿದು ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಅವಕಾಶ ಇದೆ. ನಾವು ಮಾರ್ಕೆಟ್ ವ್ಯಾಲ್ಯು ಎಂದು ತಿದ್ದುಪಡಿಯಲ್ಲಿ ತಂದಿರುವುದರಿಂದ ಕಡಿಮೆ ಬೆಲೆಗೆ ಖರೀದಿ ಆಗುವುದನ್ನು ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆ. ಈ ಬಿಲ್ಲನ್ನು ಮಾಡುವುದರಿಂದ ಅಧಿಕಾರಿಗಳು ಲಂಚ ಹೊಡೆಯುವುದು ಕಡಿಮೆಯಾಗುತ್ತದೆ. ಇನ್ನು ಕೆಲವು ಸದಸ್ಯರು ಮಾರ್ಕೆಟ್ ಬೆಲೆಯನ್ನು ನಿಗದಿ ಮಾಡುವುದು ಹೇಗೆ ಎನ್ನುವ ಪ್ರಶ್ನೆಯನ್ನು ಕೇಳಿದರು. ನನ್ನ ಅಭಿಪ್ರಾಯದಲ್ಲಿ ಎಲ್ಲೆಲ್ಲಿ ಯಾವ ಯಾವ ರೀತಿಯು ಮಾರ್ಕೆಟ್ ಬೆಲೆ ಇದೆಯೆನ್ನುವುದನ್ನು ಗೊತ್ತು ಮಾಡುವುದಕ್ಕೆ ಸಾಧ್ಯವಿದೆ. ಅದು ಅಧಿಕಾರಿಗಳ ಕೆಲಸ ಒಂದು ಪೇಟೆಯಲ್ಲಿ ಒಂದು ಕಡೆ ಹೆಚ್ಚಿನ ಖರೀದಿ ಇರುತ್ತದೆ. ಇನ್ನೊಂದು ಕಡೆ ಬಹಳ ಕಡಿಮೆ ಬೆಲೆಗೆ ಖರೀದಿ ಮಾಡುವಂಥ ಆಸ್ತಿಗಳು ಇರುತ್ತವೆ ಇದನ್ನು ಎಷ್ಟರಮಟ್ಟಿಗೆ ಕಾರ್ಯತಃ ಮಾಡುವುದಕ್ಕೆ ಸಾಧ್ಯ ಎಂದು ನಾವು ಯೋಚನೆ ಮಾಡಬೇಕಾಗಿದೆ ಒಂದೇ ಊರಿನಲ್ಲಿ ಒಂದು ಭೂಗದಲ್ಲಿ ಇರತಕ್ಕ ಜಮೀನು ಬೆಲೆ ಇನ್ನೊಂದು ಭಾಗದಲ್ಲಿ ಇರುವುದಿಲ್ಲ. ಇದನ್ನು ಯಾವ ರೀತಿ ಮಾಡುವುದಕ್ಕೆ ಸಾಧ್ಯ ಎನ್ನುವುದನ್ನು ನಾವು ಯೋಚನೆ ಮಾಡಬೇಕಾಗುತ್ತದೆ. ಸಾಮಾನ್ಯವಾಗಿ ಒಂದು ಕಡೆ ಏನು ಮಾರ್ಕೆಟ್ ಬೆಲೆ ಇದೆ ಎನ್ನುವುದನ್ನು ಸ್ಪಷ್ಟವಾಗಿ ರಿಜಿಸ್ಟ್ರಾರ್ ಅವರು ತಿಳಿಯುವುದಕ್ಕೆ ಸಾಧ್ಯವಿದೆ.

ಶ್ರೀ ಕವಗೋಡು ತಿಮ್ಮಪ್ಪ.—ಮಾರ್ಕೆಟ್ ವ್ಯಾಲ್ಯು ಡೆಫಿನೇಷನ್ ಬಗ್ಗೆ ತಿದ್ದುಪಡಿಯಲ್ಲಿ ಎಕ್ಸ್‌ಪ್ಲನೇಷನ್ ಇಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾರ್ಕೆಟ್ ವ್ಯಾಲ್ಯುಗೆ ಎಕ್ಸ್‌ಪ್ಲನೇಷನ್ ಕೊಟ್ಟಿದ್ದೇವೆ. ಅದು ನಾಲ್ಕನೇ ಪುಟದಲ್ಲಿದೆ. "For the purposes of this act, Market value of any property shall be estimated to be the price which in the opinion of the Deputy Commissioner or the appellate authority as the case may be, such property would have fetched or fetch, if sold in the open market on the date of execution of the instrument or conveyance, exchange or gift". ಎಂದು ಹೇಳಿದೆ ಇದನ್ನು ರಿಜಿಸ್ಟ್ರಾರ್ ಅವರು ನಿರ್ಧಾರ ಮಾಡುವುದಕ್ಕೆ ಮುಂಚೆ ಅವರಿಗೆ ಗೈಡ್ ಲೈನ್ ಕೊಡಬೇಕೆಂದು ಎಂದು ಮಾನ್ಯ ಶ್ಯಾಮಣ್ಣನವರು ಕೇಳಿದರು ಅದನ್ನು ಯಾವ ರೀತಿ ಮಾಡುವುದಕ್ಕೆ ಸಾಧ್ಯವೆನ್ನುವುದನ್ನು ಯೋಚನೆ ಮಾಡಿ ಗೈಡ್‌ಲೈನ್ ಕೊಡುವುದಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ. ಇದರಲ್ಲಿ ಪೆನಾಲ್ಟಿ ಕ್ಲಾಜ್ ಇಲ್ಲ ಎಂದು ಮಾನ್ಯ ಸದಸ್ಯರುಗಳು ಹೇಳಿದ್ದಾರೆ. ಈಗ (ಎ) ಕೂಡ ಇರತಕ್ಕ ಕಾನೂನಿನಲ್ಲಿ ಪೆನಾಲ್ಟಿ ಕ್ಲಾಜ್ ಇಲ್ಲದೇನೇ ವಿಧಿಯಲ್ಲಿ ಸ್ಪಷ್ಟವಾಗಿ ಪೆನಾಲ್ಟಿ ಕ್ಲಾಜ್ ಇದೆ. ಇದಕ್ಕೆ ಸೆಕ್ಷನ್ ೪೫ ಅನ್ವಯಿಸುತ್ತದೆ. ಮಾನ್ಯ ಸದಸ್ಯರಾದ ಶಾಮಣ್ಣನವರು ಇದನ್ನು ರಾಂಡಂ ಆಗಿ ಚೆಕ್ ಮಾಡಬೇಕು ಎಂದು ಹೇಳಿದರು. ಇದನ್ನು ಯಾವ ರೀತಿ ಮಾಡುವುದಕ್ಕೆ ಸಾಧ್ಯ ಇದೆ. ನಮ್ಮ ಜಿಲ್ಲಾಧಿಕಾರಿಗಳಾಗಲೀ, ಇನ್ಸ್‌ಪೆಕ್ಟರ್ ಜನರಲ್ ಫಾರ್ ರಿಜಿಸ್ಟ್ರೇಷನ್ ಇವರಿಗಾಗಲೀ, ಉಳಿದ ಕೆಲವು ಅಧಿಕಾರಿಗಳಿಗಾಗಲೀ ಆಗಿಂದಾಗ್ಗೆ ಚೆಕ್ ಮಾಡತಕ್ಕ ಅಧಿಕಾರ ಇದೆ. ಅಧಿಕಾರಿಗಳಿಗೆ ದೂರು ಬಂದ ಸಂದರ್ಭದಲ್ಲಾಗಲೀ ಅಥವಾ ಸಾಮಾನ್ಯವಾಗಿ ಯಾವ ಯಾವ ಪ್ರದೇಶದಲ್ಲಿ ಎಷ್ಟು ಬೆಲೆ ಇದೆ ಎನ್ನುವುದು ಗೊತ್ತಾದ ಮೇಲೆ ಕಡಿಮೆಬೆಲೆ ಹಾಕಿದ್ದರೆ, ಇದು ಜಿಲ್ಲಾಧಿಕಾರಿಗಳ ಗಮನಕ್ಕೆ ಬಂದರೆ ಅದನ್ನು ಪತ್ತೆ ಮಾಡುವುದಕ್ಕೆ ಸಾಧ್ಯವಿದೆ. ಈ ಎಲ್ಲಾ ದೃಷ್ಟಿಯಿಂದ ಈ ಒಂದು ತಿದ್ದುಪಡಿಯ ಅವಶ್ಯಕತೆ ಬಿದ್ದಿದೆ. ಆದ್ದರಿಂದಲೇ ತಿದ್ದುಪಡಿಯನ್ನು ತಂದಿದ್ದೇವೆ.

ಇನ್ನು ಉಳಿದ ಪ್ರದೇಶಗಳಲ್ಲಿ ಇದು ಏತಕ್ಕೆ ಅನ್ವಯಿಸಬಾರದು ಎಂದು ಕೇಳಿದ್ದಾರೆ. ಇದರಲ್ಲಿ ೪೫ (ಎ) ಬಿಟ್ಟರೆ ಉಳಿದ ಎಲ್ಲಾ ವಿಧಿಗಳೂ ಕೂಡ ರಾಜ್ಯದ ಎಲ್ಲಾ ಭಾಗಗಳಿಗೂ ಅನ್ವಯಿಸುವಂತೆ ಮಾಡಿದೆ. ೪೫ (ಎ) ನಲ್ಲಿ ಪಟ್ಟಣಗಳಿಗೆ ಮಾತ್ರ ಅನ್ವಯಿಸುವಂತೆ ಈ ಮಸೂದೆಯಲ್ಲಿ ತಂದಿದೆ. ವ್ಯವಹಾರಿಕವಾಗಿ ಇದು ಯಾವರೀತಿ ಆಗುತ್ತದೆ ಅನ್ನುವುದನ್ನು ಹೋಡಿ ಕಾರ್ಯತಃ ಯಾವರೀತಿ ಬದಲಾವಣೆ ತರಬಹುದು ಅನ್ನುವುದಕ್ಕೂ ಕೂಡ ಇದರಲ್ಲಿ ಅವಕಾಶ ಇದೆ. ಮತ್ತು ಇದನ್ನು ಯಾವಾಗ ಮಾಡಬೇಕು ಅನ್ನುವುದರ ಬಗ್ಗೆ ಅದಷ್ಟು ಬೇಗ ತೀರ್ಮಾನ ತೆಗೆದುಕೊಂಡು ರಾಜ್ಯದ ಎಲ್ಲಾ ಭಾಗಗಳಿಗೂ ಕೂಡ ಇದನ್ನು ವಿಸ್ತರಿಸಬೇಕು ಅನ್ನುವ ಉದ್ದೇಶವೂ ಇದೆ. ಆದುದರಿಂದ ಈಗ ಸದ್ಯಕ್ಕೆ ಈ ಮಸೂದೆಯಲ್ಲಿ ತಂದಿರತಕ್ಕಂಥ ತಿದ್ದುಪಡಿಗಳಿಗೆ ಈ ಸಭೆ ಒಪ್ಪಿಗೆ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಮಾರ್ಕೆಟ್ ವ್ಯಾಲ್ಯೂ ಅನ್ನು ಡಿಟರ್‌ಮಿನ್ ಮಾಡುವುದಕ್ಕೆ ಕೆಲವು ರೂಲ್ಸ್‌ಗಳನ್ನು ಮಾಡಬೇಕಾಗುತ್ತದೆ. ಅದಕ್ಕೆ ಇದರಲ್ಲಿ ಅವಕಾಶ ಕಲ್ಪಿಸಿಲ್ಲ.

SRI N. HUTCHAMASTHY GOWDA.—In Section 46 (A), Sub-Clause (5) says as follows :—

"(5) Any person aggreived by an order of the Deputy Commissioner under sub-section (2) or Sub Section (3) may, prefer an appeal before the District Judge and all such appeal shall be preferred within such time and be heard and disposed of in such manner as the State Government may by rules prescribe ಅಂತ ಇದೆ.

MR. DEPUTY SPEAKER,—All the suggestions of the Hon. Member are bound to be considered by Government.

ಶ್ರೀ ಕಾಗೋಡು ತಿಮ್ಮಪ್ಪ —ಈ ಮಾರ್ಕೆಟ್ ವ್ಯಾಲ್ಯೂ ಬಗ್ಗೆ ಎಕ್ಸ್‌ಪ್ಲನೇಷನ್ ಏನು ಇದೆ. ಅದರಲ್ಲಿ ಮಾರ್ಕೆಟ್ ವ್ಯಾಲ್ಯೂವನ್ನು ನಿರ್ಧಾರ ಮಾಡುವಾಗ ಕೆಲವು ರೂಲ್ಸ್‌ಗಳನ್ನು ಮಾಡಬೇಕಾಗುತ್ತದೆ. ಅದಕ್ಕೆ ಇದರಲ್ಲಿ ಅವಕಾಶ ಇರಬೇಕು.

Sri N. HUTCHAMASTHY GOWDA.—In the Original Act, it has been stated that the State Government may, by notification in the Official Gazette, make rules to carry out the general purposes of this Act...

SRI KAGODU THIMMAPPA.—Deputy Commissioner is the supreme authority. Beyond the scope of this explanation, you cannot make any rules.

MR. DEPUTY SPEAKER.—All the suggestions of the Hon. Member are very good. His Intention is not disputed.

SRI KAGODU THIMMAPPA.—The Rules cannot go beyond the scope of the Act.

ಶ್ರೀ ಎನ್. ಹುಚ್ಚಮಾಸ್ತಿಗಾಡ.—ಈಗ ನಾವು ಏನು ತಿದ್ದುಪಡಿ ತಂದಿದ್ದೇವೋ, ಈ ತಿದ್ದುಪಡಿಗನುಗುಣವಾಗಿ ರೂಲ್ಸ್‌ಗಳನ್ನು ಮಾಡುವುದಕ್ಕೆ ಅವಕಾಶ ಇದೆ.

SRI KAGODU THIMMAPPA.—In the explanation given for market value, it has been stated that the supreme authority is vested with the Deputy Commissioner. Therefore, you cannot take away that powers vested in that Section by means of making rules. If you want to set out any guide lines for the Deputy Commissioner—while fixing the market value, you must provide certain provision in the Act itself.

MR. DEPUTY SPEAKER.—The Hon. Member is dragging the point too much further which is bad.

Now, I will put the motion to the vote of the House. The question is :

"That the Karnataka Stamp (Amendment) Bill, 1975 be taken into consideration."

The Motion was adopted.

CLAUSE 2 to 4

MR. DEPUTY SPEAKER.—The question is :

" That Clause 2, to 4, both inclusive, do stand part of the Bill."

The Motion was adopted

Clauses 2, to 4, both inclusive, were added to the Bill.

CLAUSE-5

MR. DEPUTY SPEAKER,—Hon. Member Sri Shamanna may move his amendments, for Clause 5.

SRI T. R. SHAMANNA.—I move :

" That in Clause 5 after each sub-clauses (1), (2), (3) add the following :—

"Together with apenalty upto 50 percent Stamp Value payable on the market value of the property conveyed."

MR. DEPUTY SPEAKER —Amendment moved :

"That in Clause 5 after each sub-clauses (1), (2), (3) add the following :—

"Together with a penalty upto 50 percent Stamp Value payable on the market value of the property conveyed."

Sri Shamanna may move his second amendment also.

SRI T. R. SHAMANNA.—I move :

"That in clause 5 delete the proviso and insert the following proviso *viz.*,

"Provided that that the provisions of these sub-sections may be applied to all the instruments registered after 1st April, 1972."

MR. DEPUTY SPEAKER.—Amendment moved :

"That in clause 5 delete the proviso and insert the following proviso *viz.*,

"Provided that the provisions of these sub-sections may be applied to all the intruments registered after 1st April, 1972."

Throwing Pamphlets from the Public Gallery

(*At that stage two men shouted the slogan* "ಈ ನೀತಿಗೆಟ್ಟ ಸರ್ಕಾರಕ್ಕೆ ಧಿಕ್ಕಾರ...ಧಿಕ್ಕಾರ...*and throw pamphlets from the Visitors Gallery*)

MR. DEPUTY SPEAKER.—Let those people be taken into custody and brought to the Ante Chamber of the Speaker.

(Karnataka Stamp (Amendment Bill 1975 (Contd)

SRI T. R. SHAMANNA.—According to Contract Act, consideration must not only be valuable but adequate also. ಆದುದರಿಂದ ಕನ್ಸಿಡರೇಷನ್ ಅನ್ನುವುದನ್ನು ಮಾರ್ಕೆಟ್ ವ್ಯಾಲ್ಯೂ ಅಂತ ಮಾಡಿದರೆ ಆದನ್ನು ರೆಟ್ರಾಸ್ಪೆಕ್ಟೀವ್ ಎಫೆಕ್ಟ್ ಆಗಿ ಕೊಡಬೇಕು ಅನ್ನುವುದಾದರೆ ಬಹಳ ಕಷ್ಟವಾಗುತ್ತದೆ. ೧೦ ರೂಪಾಯಿ ಇದ್ದುದನ್ನು ೩ ಕಾಸು ಅಂತ ಹೇಳುವುದಕ್ಕಾಗುವುದಿಲ್ಲ. ಅದು ನ್ಯಾಯವಾಗಿರಬೇಕು. ಆದುದರಿಂದ ಇದನ್ನು ರಿಟ್ರಾಸ್ಪೆಕ್ಟೀವ್ ಎಫೆಕ್ಟ್‌ಗೆ ಕೊಡಬೇಕಾದರೆ ಕಷ್ಟವಾಗುತ್ತದೆ ಎಂದು ಅವರು ಹೇಳಿದರು. ಆದರೆ If the Hon. Member of the treasury bencher are equally anxious to give relief in some respects, we will certainly thank them. Whenever we suggest something, in order to give relief to the poor people, they somehow reject it, and stick to their own method. This hurts us to a certain extent. We are not only asking you to give retrespective effect but we also want to see that those who have committed the offence must pay the penalty.

ನಾನಾಗಲೇ ಹೇಳಿದ ಹಾಗೆ ರಿಟ್ರಾಸ್‌ಪೆಕ್ಟೀವ್ ಆಗಿ ಇದರಲ್ಲಿ ಕೊಡ ಕೂಡದು ಎಂದು ಮಾನ್ಯ ಮಂತ್ರಿಗಳು ಹೇಳಿದರು. ಈಚೆಗೆ ಇದೇ ಸದನದಲ್ಲಿ ನಾಲ್ಕು ಬಿಲ್ಲುಗಳನ್ನು ಪಾಸು ಮಾಡಿದ್ದಾರೆ ಇದರಲ್ಲಿ ಎಲ್ಲದರಲ್ಲೂ ರಿಟ್ರಾಸ್‌ಪೆಕ್ಟೀವ್ ಎಂದು ಇದೆ ಹಾಗೆ ಇದರಲ್ಲೂ ಕೂಡ ಏಕೆ ತರಬಾರದು? ಕಾಂಟ್ರಾಕ್ಟ್ ಆಕ್ಟ್‌ನ ಡೆಫಿನಿಷನ್‌ನಲ್ಲಿ It must not only be adequate and it must be valuable. ಎಂದು ಇದೆ ಇದರ ಜೊತೆಗೆ ಮಾನ್ಯ ಮಂತ್ರಿಗಳು ಹೇಳಿದಂತೆ ಹಿಂದೆ ೧೪ ಕೋಟಿಯ ವ್ಯವಹಾರಗಳಾಗಿದೆ ಮತ್ತು ಮುಂದೂ ಕೂಡ ಹೀಗೆ ಆಗುತ್ತೇ ಎಂದು ಹೇಳಲು ಆಗುವುದಿಲ್ಲ ಎಂದು ನನ್ನ ಊಹೆ. ಆದುದರಿಂದ ನಿಮ್ಮ ಪಕ್ಷದ ಥೊರಣೆ ಸೋಷಿಯಲಿಸ್ಟಿಕ್ ಪ್ಯಾಟರ್ನ್ ಆಫ್ ಸೊಸೈಟಿ ತರಬೇಕೆಂದು ಇರುವಾಗ ಇಂತಹ ಒಂದು ತಿದ್ದುಪಡಿಯನ್ನು ಸರಕಾರ ಒಪ್ಪಬಹುದು. ಇದು ನಿಮ್ಮ ಥೋರಣೆಗೆ ಅನುಕೂಲವಾಗಿದೆ ಹಾಗೆ ಇದನ್ನು ಒಪ್ಪಿಕೊಡಿರಿ ನಿಮ್ಮ ಪಕ್ಷದವರಿಗೆ ಅನಾನುಕೂಲವಾಗುತ್ತದೆ ಎಂದು ಇಲ್ಲಿ ಇದನ್ನು ಒಪ್ಪುತಿಲ್ಲ ಎಂದು ತೋರುತ್ತೆ. ಏಕೆಂದರೆ ಇಂದು ಡಿಡೀರ್ ಶ್ರೀ ಮಂತರಾಗಿರುವವರು ಬಹಳವಾಗಿ ನಿಮ್ಮ ಪಕ್ಷದವರೇ ಹೆಚ್ಚಾಗಿದ್ದಾರೆ. ಆದುದರಿಂದ ನನ್ನ ತಿದ್ದುಪಡಿಯಲ್ಲಿ ತಂದಿರುವಂತೆ ಇದನ್ನು ಒಂದನೇ ತಾರೀಖು ಏಪ್ರಿಲ್ ೧೯೭೬ ರಿಂದ ಜಾರಿಗೆ ತರಬಹುದು. ಇದರ ಜೊತೆಗೆ ಆಕ್ಟ್ಯಾಯಿ ಆಕ್ಟಿನಲ್ಲಿ ಯಾರಾದರೂ ಆಕ್ಟ್ಯಾಯಿ ಕೊಡುವುದನ್ನು ತಪ್ಪಿಸಿ ಕೊಂಡರೆ ಆ ನಂತರ ಆದನ್ನು ಪತ್ತೆ ಹಚ್ಚಿ ಅವರ ಮೇಲೆ ಕೇಸು ಹಾಕುವಾಗ ಒಂದಕ್ಕೆ ಹತ್ತರಷ್ಟು ವಸೂಲು ಮಾಡಬಹುದು ಎಂದು ಕಾರ್ಪೊರೇಷನ್‌ನಲ್ಲಿ ಕಮಿಷನರಿಗೆ ಅಧಿಕಾರ ಕೊಡಲಾಗಿದೆ. ಆದುದರಿಂದ ಇಲ್ಲೂ ಕೂಡ ಇಂತಹ ಒಂದು ಪೆನಾಲ್ಟಿ ಕ್ಲಾಸ್ ಇರಬೇಕೆಂದು ತಿದ್ದುಪಡಿ ತಂದಿದ್ದೇನೆ. ಇದನ್ನು ಒಪ್ಪಬಹುದು ಮತ್ತು ರಿಟ್ರಾಸ್‌ಪೆಕ್ಟೀವ್ ಆಗಿ ಇದನ್ನು ಜಾರಿಗೆ ಕೊಡಬಹುದು. ಇದಕ್ಕಾಗಿ ಸರಕಾರ ನನ್ನ ತಿದ್ದುಪಡಿಯನ್ನು ಒಪ್ಪಬೇಕೆಂದು ಹೇಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ —ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಹೇಳಿದ ಹಾಗೆ ೭೧ನೇ ವಿಧಿಯಲ್ಲಿ ಪೆನಾಲ್ಟಿ ಕ್ಲಾಸು ಇದೆ ಮತ್ತು ಇದರಲ್ಲಿ ಸಾಕಷ್ಟು ಅಧಿಕಾರಗಳೂ ಇವೆ ಆದುದರಿಂದ ಮಾನ್ಯ ಸದಸ್ಯರು ತಂದಿರುವ ತಿದ್ದುಪಡಿಯನ್ನು ಮಾಡುವ ಆವಶ್ಯಕತೆ ಇಲ್ಲ.

ಇನ್ನು ರಿಟ್ರಾಸ್‌ಪೆಕ್ಟೀವ್ ಎಫೆಕ್ಟ್ ಆಗಿ ಏಕೆ ತರಲಾಗುವುದಿಲ್ಲ ಎಂದು ನಾನು ಆಗಲೇ ವಿವರಗಳನ್ನು ತಿಳಿಸಿದ್ದೇನೆ ಇದರಲ್ಲಿ ಕಾಂಟ್ರಾಕ್ಟು ಆಕ್ಟ್‌ನ ಡಿಫನಿಷನ್ ಇಲ್ಲಿ ತರಲಾಗುವುದಿಲ್ಲ. ಇಲ್ಲಿರ ತಕ್ಕದ್ದು ಕನ್ಸಿಡರೇಷನ್ ಎಂದರೆ as set forth in the instrument ಎಂದು ಕ್ರಯಪತ್ರ ರಿಜಿಸ್ಟರು ಆಗುವಾಗ ಅದು ಯಾವ ರೀತಿಯ ಪತ್ರ ಎನ್ನುವುದೆಲ್ಲ ನೋಡಿ ಮಾಡಬೇಕಾಗುತ್ತದೆ. ಕಾಂಟ್ರಾಕ್ಟ್‌ಗೂ ಆಕ್ಟಗೂ ಇದಕ್ಕೂ ಸಂಬಂಧವಿಲ್ಲ. ಆದುದರಿಂದ ಇವೆರಡು ತಿದ್ದುಪಡಿಗಳನ್ನೂ ಒಪ್ಪುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಸದಸ್ಯರು ಅವರ ತಿದ್ದುಪಡಿಗಳನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ನಾನು ಅವರಲ್ಲಿ ಕೇಳಿಕೊಳ್ಳುತ್ತೇನೆ.

Mr. DEPUTY SPEAKER —I will put the first amendment to the vote of the House.

The question is :

"That in clause 5 after each sub-clauses (1), (2), (3) add the followings :—

"Together with a penalty upto 50 per cent Stamp value payable on the market value of the property conveyed."

The amendment was negatived

I shall now put the Second Amendment of Sri Shamanna The question is :

"That in Clause 5 delete the proviso and insert the following proviso *viz.* :

"Provided that the Provisions of these sub-sections may be applied in all the instruments registered after 1st April 1972."

The amendment was negatived

I shall put clause No. 5. The question is :

"That Clause 5 do stand part of the Bill"

The Motion was adopted

Clause 5 was added to the Bill.

CLAUSE 6 TO 8

MR. DEPUTY SPEAKER.—I will put Clauses 6, 7 and 8 to vote. The question is :

"That clauses 6 to 8, both inclusive, do stand part of the Bill."

The motion was adopted

Clauses 6 to 8, both inclusive were added to the Bill.

CLAUSE NO. 1 ETC.

SRI N. HUTCHAMASTHI GOWDA.—Sir, in sub-clause 2 of Clause 1 the following shall be substituted. *viz.* :—

" (2) (a) This section and all other sections of this Act, except Section 5, shall come into force in the whole of the State on the first day of May 1975.

(b) Section 5 shall come into force in the City of Bangalore, the City of Hubli-Dharwar and the City Municipalities of Mysore, Mangalore, Belgaum, Gulbarga, Bellary, Davanagere, Bijapur, Shimoga and Bhadravathi on the said date and in the other areas of the State on such date as the State Government may by notification specify and different dates may be specified for different areas."

MR. DEPUTY SPEAKER.—The question is :

"That in sub-clause 2 of Clause 1 the following shall be substituted, *viz.*,

"(2) (a) This section and all other sections of this Act, except section 5, shall come into force in the whole of the State on the first day of May 1975.

(b) Section 5 shall come into force in the City of Bangalore, the City of Hubli-Dharwar and the City Municipalities of Mysore, Mangalore, Belgaum, Gulbarga, Bellary, Davanagere, Bijapur, Shimoga and Bhadravathi on the said date and in the other areas of the State on such date as the State Government may by notification, specify and different dates may be specified for different areas"

The amendment was adopted

MR. DEPUTY SPEAKER.—The question is :
That Clause I as amended do stand part of the Bill.

The motion was adopted

Clause I as amended was added of the Bill.

MR. DEPUTY SPEAKER.—I shall put clause I as amended, the preamble and the title to the vote of the House.

The question is :

"That clause I, as amended, the Long Title, the Preamble and the Enacting formula do stand part of the Bill."

The motion was adopted

Clause I as amended, the Long Title, the Preamble, and the Enacting formula were added to the Bill.

MOTION TO PASS

SRI N. HUTCHAMASTHI GOWDA.—Sir, I beg to move :

"That the Karnataka Stamp Amendment Bill, 1975, as amended be passed.'"

MR. DEPUTY SPEAKER.—The question is :

"That the Karnataka Stamp amendment Bill, 1975, as amended be passed."

The motion was adopted and the Bill as amended was passed

Registration (Karnataka Amendment) Bill, 1975

Motion to consider

SRI N. HUTCHAMASTHY GOWDA.—Sir, I beg to move :

That the Registration (Karnataka Amendment)Bill, 1975 be taken into consideration.